ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಮುಖ್ಯಮಂತ್ರಿಗಳೇ, ಈಗ statement ಕೊಡುತ್ತಾರಾ?

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಜಲಸಂಪನ್ಮೂಲ ಸಚಿವರು ಹಾಗೂ ಶಿಕ್ಷಣ ಸಚಿವರು ಇಬ್ಬರೂ ಇಲ್ಲ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಸಂಬಂಧಪಟ್ಟ ಮಂತ್ರಿಗಳು ಹಾಜರಿದ್ದಾರೆ. statement ಕೊಡುತ್ತಾರೆ.

9. ಕಾವೇರಿ ನೀರಿನ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಜಲಸಂಪನ್ಮೂಲ ಸಚಿವರ ಹೇಳಿಕೆ :

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) : ಕಾವೇರಿ ನೀರಿನ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರವು ದಿನಾಂಕ:21–3–2012ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಮಧ್ಯಂತರ ಅರ್ಜಿಯ ಕುರಿತಂತೆ ಸರ್ಕಾರದ ಹೇಳಿಕೆಯನ್ನು ಓದುತ್ತೇನೆ.

1.0 ತಮಿಳುನಾಡು ಸರ್ಕಾರವು, ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಮಧ್ಯಂತರ ಅರ್ಜಿ ಸಲ್ಲಿಸಿ, ಕಾವೇರಿ ನೀರಿನ ಹಂಚಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ, ಕೆಳಕಂಡ ನಿರ್ದೇಶನಗಳನ್ನು ನೀಡಲು ಕೋರಿರುತ್ತದೆ.

i) ಕರ್ನಾಟಕ ಸರ್ಕಾರವು ಬೇಸಿಗೆ ನೀರಾವರಿಗೆ ನೀರು ಪೂರೈಕೆ ಮತ್ತು ಕೆ.ಆರ್.ಎಸ್, ಕಬಿನಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳಿಂದ ಫೆಬ್ರವರಿಯಿಂದ ಮೇ ತಿಂಗಳವರೆಗೆ ನೀರನ್ನು ಬಳಸದಂತೆ ನಿರ್ದೇಶಿಸುವುದು.

ii) ತಮಿಳುನಾಡಿನ ನೀರಾವರಿ ಪ್ರದೇಶಕ್ಕೆ ಯಾವುದೇ ತೊಂದರೆ ಗಳಾಗದಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಕೆ.ಆರ್.ಎಸ್, ಕಬಿನಿ, ಹೇಮಾವತಿ ಮತ್ತು ಹಾರಂಗಿ ಜಲಾಶಯಗಳಿಂದ ನಿಗದಿ ಯಾಗಿರುವ 103.24 ಟಿ.ಎಂ.ಸಿ.ಯ ಹೆಚ್ಚಿನ ನೀರು ಬಳಸದಂತೆ ಕರ್ನಾಟಕ ಸರ್ಕಾರವನ್ನು ನಿಯಂತ್ರಿಸಬೇಕು.

ಹಿನ್ನೆಲೆ :

2.0 ಕಾವೇರಿ ಜಲವಿವಾದ ನ್ಯಾಯಾಧಿಕರಣವನ್ನು ದಿನಾಂಕ: 2/6/1990 ರಲ್ಲಿ ರಚಿಸಲಾಯಿತು. ಈ ನ್ಯಾಯಾಧಿಕರಣವು ಅಂತರ್ ರಾಜ್ಯ ನದಿ ನೀರಿನ ವಾದ ಕಾಯ್ದೆ, 1956 (Inter State Disputes Act, 1996) ಅನುಸಾರ ಸೆಕ್ಷನ್ 3ರನ್ವಯ ತಮಿಳುನಾಡು ಸರ್ಕಾರವು ಸಲ್ಲಿಸಿದ್ದ ದೂರಿನನ್ವಯ ವಿಚಾರಣೆ ನಡೆಸಿ, ದಿನಾಂಕ: 25/6/1991 ರಲ್ಲಿ ಮಧ್ಯಂತರ ಆದೇಶವನ್ನು ಹೊರಡಿಸಿ, ತಮಿಳುನಾಡಿಗೆ ಪ್ರತಿ ವರ್ಷ 205 ಟಿ.ಎಂ.ಸಿ. ನೀರನ್ನು ಮೆಟ್ಟೂರು ಬಳಿ (ಇದನ್ನು ಮಾಸಿಕ ಪ್ರಮಾಣ / ವಾರದ ಪ್ರಮಾಣವೆಂದು ವಿಭಾಗಿಸಿದೆ) ಖಚಿತಪಡಿಸಲು ನಿರ್ದೇಶಿಸಿತು. ನಂತರ 3/4/1992 ಹಾಗೂ 19/12/1995 ರಲ್ಲಿ ಹೊರಡಿಸಿದ ಮಧ್ಯಂತರ ಆದೇಶ ಗಳಲ್ಲಿ ಕೆಲವೊಂದು ಸ್ಪಷ್ಟೀಕರಣವನ್ನು ನೀಡಲಾಗಿದ್ದು, ಬರಗಾಲದ ಪರಿಸ್ಥಿತಿಯಲ್ಲಿ, ನೀರನ್ನು ಪ್ರೋರೇಟಾ ಆಧಾರದ ಮೇಲೆ ಹಂಚಿಕೆ ಮಾಡುವ ಬಗ್ಗೆ ವಿವರಣೆ ನೀಡಿದೆ.

ಅಂತಿಮವಾಗಿ, ನ್ಯಾಯಾಧೀಕರಣವು ದಿನಾಂಕ: 5/2/2007 ರಲ್ಲಿ ಅಂತಿಮ ಆದೇಶ ಹೊರಡಿಸಿದ್ದು, ಕರ್ನಾಟಕ ಸರ್ಕಾರಕ್ಕೆ ಗಡಿಯಲ್ಲಿರುವ ಬಿಳಿಗುಂಡ್ಲುವಿನ ಬಳಿ 192 ಟಿ.ಎಂ.ಸಿ. ನೀರನ್ನು ಒದಗಿಸಲು (ಇದನ್ನು ಮಾಸಿಕ ಪ್ರಮಾಣ / ವಾರದ ಪ್ರಮಾಣವೆಂದು ವಿಭಾಗಿಸಿದೆ) ತೀರ್ಪು ನೀಡಿದೆ. ಮಧ್ಯಂತರ ಆದೇಶದಲ್ಲಿ, ಕರ್ನಾಟಕ ಸರ್ಕಾರಕ್ಕೆ 11.2 ಲಕ್ಷ ಎಕರೆಗೆ ನೀರಾವರಿಯನ್ನು ಸೀಮಿತಗೊಳಿಸಿದ್ದು, ಅಂತಿಮ ಆದೇಶದಲ್ಲಿ crop water requirement ಗಾಗಿ 18.85 ಲಕ್ಷ ಎಕರೆ ಪ್ರದೇಶವನ್ನು ಪರಿಗಣಿಸಿರುವುದರ ಹೊರತಾಗಿ, ಆ ರೀತಿಯ ಯಾವುದೇ ನಿರ್ಬಂಧ ವಿಧಿಸಿರುವುದಿಲ್ಲ.

2.1 ದಿನಾಂಕ: 05.02.2007ರ ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ಒಪ್ಪದೇ, ಕರ್ನಾಟಕ ಸರ್ಕಾರದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಂವಿಧಾನದ ಆರ್ಟಿಕಲ್ 136ರನ್ವಯ ಎಸ್.ಎಲ್.ಪಿ. ಯನ್ನು ದಾಖಲಿಸಲಾಗಿದೆ. ದಿನಾಂಕ: 07.05.2007 ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎಸ್.ಎಲ್.ಪಿ. ಯನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಲು ಒಪ್ಪಿದೆ.

ತಮಿಳುನಾಡು ಮತ್ತು ಕೇರಳ ಸರ್ಕಾರಗಳೂ ಕೂಡ ನ್ಯಾಯಾಧಿಕರಣದ ಅಂತಿಮ ತೀರ್ಪನ್ನು ಪ್ರಶ್ನಿಸಿ, ಅರ್ಜಿ ಸಲ್ಲಿಸಿವೆ. ಸಿವಿಲ್ ಅಪೀಲ್ ಸಂ: 2453, 2454 ಮತ್ತು 2456/2000 ಗಳು ಮೂವರು ನ್ಯಾಯಾಧೀಶರುಗಳನ್ನೊಳಗೊಂಡ ಸರ್ವೋಚ್ಚ ನ್ಯಾಯಾಲಯದ ಪೀಠದ ಮುಂದೆ ಬಾಕಿ ಇವೆ.

2.2 ನ್ಯಾಯಾಧಿಕರಣದ ಸೆಕ್ಷನ್ 5(3)ರಡಿಯಲ್ಲಿ ಅರ್ಜಿ :

ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಪುದುಚೇರಿ ರಾಜ್ಯಗಳು 1956ರ ಕಾಯ್ದೆ ಸೆಕ್ಷನ್ 5(3) ರಡಿಯಲ್ಲಿ ನ್ಯಾಯಾಧಿಕರಣದ ಸ್ಪಷ್ಟೀಕರಣ ಹಾಗೂ ನಿರ್ದೇಶನಗಳನ್ನು ಕೋರಿ ಅರ್ಜಿ ಸಲ್ಲಿಸಿವೆ. ನ್ಯಾಯಾಧಿಕರಣವು ದಿನಾಂಕ: 10.07.2007ರ ಆದೇಶದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದಿರುವ ಸಿವಿಲ್ ಅಪೀಲ್‌ಗಳು ವಿಲೇವಾರಿಯವರೆಗೆ ಈ ಅರ್ಜಿಗಳನ್ನು ಮುಂದೂಡಿದೆ. ಈಚೆಗೆ ತಮಿಳುನಾಡು ಸರ್ಕಾರವು ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಪ್ರಶ್ನಿಸಿದ್ದು, ಸರ್ವೋಚ್ಚ ನ್ಯಾಯಾಲಯವು, ದಿನಾಂಕ: 18.10.2011ರ ಆದೇಶದಲ್ಲಿ ತಮಿಳುನಾಡು ಅರ್ಜಿಯನ್ನು ತಿರಸ್ಕರಿಸಿದೆ.

2.3 ನ್ಯಾಯಾಧಿಕರಣದ ಅಂತಿಮ ಆದೇಶದ ಸ್ಥಿತಿ:

ನ್ಯಾಯಾಧಿಕರಣದ ದಿನಾಂಕ: 05.02.2007ರ ಅಂತಿಮ ಆದೇಶವು ಅಂತರ ರಾಜ್ಯ ಜಲವಿವಾದ ಕಾಯ್ದೆ 1956ರ ಸೆಕ್ಷನ್ 6(1)ರನ್ವಯ ಪ್ರಕಟಣೆಯಾದ ನಂತರವಷ್ಟೇ ಜಾರಿಗೆ ಬರುತ್ತದೆ. ನ್ಯಾಯಾಧಿಕರಣದ ಸೆಕ್ಷನ್ 5(3)ರನ್ವಯ ಬಾಕಿ ಇರುವ ಅರ್ಜಿಗಳ ಹಿನ್ನೆಲೆಯಲ್ಲಿ, ಭಾರತ ಸರ್ಕಾರವು ಅಂತಿಮ ಆದೇಶವನ್ನು ಪ್ರಕಟಗೊಳಿಸಿರುವುದಿಲ್ಲ. ಹಾಗಾಗಿ, ಅಂತಿಮ ಆದೇಶಕ್ಕೆ ತಡೆಯಾಜ್ಞೆ ತರುವುದರಿಂದ ಯಾವುದೇ ಪರಿಣಾಮ ಉಂಟಾಗಿರು ವುದಿಲ್ಲವಾಗಿ, ಕರ್ನಾಟಕ ಸರ್ಕಾರವು ನ್ಯಾಯಾಲಯದ ಆದೇಶದ ನಿರೀಕ್ಷೆಯಲ್ಲಿದೆ. ಈ ಮಧ್ಯೆ, ತಮಿಳುನಾಡು ಸರ್ಕಾರವು ಅನೇಕ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿದ್ದು, ಈಗ ಸಲ್ಲಿಸಿರುವ ಮಧ್ಯಂತರ ಅರ್ಜಿಯು ಅವುಗಳಲ್ಲಿ ಒಂದಾಗಿರುತ್ತದೆ. ಈ ಎಲ್ಲಾ ಮಧ್ಯಂತರ ಅರ್ಜಿಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇನ್ನೂ ಪರಿಗಣಿಸಬೇಕಾಗಿರುತ್ತದೆ.

2.4 ಮಧ್ಯಂತರ ಆದೇಶ ಹಾಗೂ ಅಂತಿಮ ಆದೇಶಗಳ ಬಗ್ಗೆ ಕರ್ನಾಟಕದ ನಿಲುವು :

ದಿನಾಂಕ: 05.07.2007 ರಂದು ಹೊರಡಿಸಿರುವ ಅಂತಿಮ ನಿರ್ಧಾರವು ಅಂತರ ರಾಜ್ಯ ಜಲವಿವಾದ ಕಾಯ್ದೆ 1956ರ ಸೆಕ್ಷನ್ 6(1)ರ ಪ್ರಕಾರ ಕೇಂದ್ರ ಸರ್ಕಾರದ ರಾಜ್ಯಪತ್ರದಲ್ಲಿ ಇದೂವರೆಗೂ ಪ್ರಕಟಗೊಂಡಿರುವುದಿಲ್ಲವಾದ್ದರಿಂದ ಈ ಆದೇಶವು ಜಾರಿಗೆ ಬಂದಿರುವುದಿಲ್ಲ. ಹಾಗೂ ದಿನಾಂಕ: 25.06.1991ರ ಮಧ್ಯಂತರ ಆದೇಶವು ಅಂತಿಮ ತೀರ್ಪು ಬಂದ ನಂತರ ತನಗೆ ತಾನೇ ಅಂತಿಮಗೊಂಡು ಅದೂ ಕೂಡ ಜಾರಿಯಲ್ಲಿರುವುದಿಲ್ಲ.

ಆದರೂ ಕೂಡ ಕರ್ನಾಟಕ ಸರ್ಕಾರವು ದಿನಾಂಕ: 12.08.1998 ರಲ್ಲಿ ಅಂತರ ರಾಜ್ಯ ಗಡಿ ಜಲವಿವಾದ ಕಾಯ್ದೆ 1956ರ ಕಲಂ 6(ಎ)ಅಡಿಯಲ್ಲಿ ಕೇಂದ್ರ ಸರ್ಕಾರವು ರಚಿಸಿರುವ ಕಾವೇರಿ ನದಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಈ ಬಗ್ಗೆ ಪರಿಹಾರ ಕೋರಲಾಗಿದೆ. ಆದರೆ, ಕಾವೇರಿ ನದಿ ಪ್ರಾಧಿಕಾರವು ಯಾವುದೇ ರೀತಿಯಲ್ಲಿ ಸ್ಪಂದಿಸಿರುವುದಿಲ್ಲ.

ಏತನ್ಮಧ್ಯೆ, ಸಧ್ಯದ ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯವು ದಿನಾಂಕ: 05.02.2007 ರಂದು ಹೊರಡಿಸಿರುವ ಅಂತಿಮ ಆದೇಶವು ಕೇಂದ್ರ ಸರ್ಕಾರದ ರಾಜ್ಯಪತ್ರದಲ್ಲಿ ಪ್ರಕಟಗೊಂಡಿರದಿದ್ದರೂ ಸಹ ಹಾಗೂ ಆದೇಶದಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಬೇಡಿಕೆಗಳು ಸಂಪೂರ್ಣವಾಗಿ ಈಡೇರದಿದ್ದರೂ ಸಹ, ಅಂತಿಮ ಆದೇಶದ ಪ್ರಕಾರ ನೀರಿನ ನಿಯಂತ್ರಣ ನಿರ್ವಹಿಸುತ್ತಿರುವುದಾಗಿ ತಿಳಿಸಿರುತ್ತದೆ.

ತಮಿಳುನಾಡಿಗೆ ಬಿಡಬೇಕಾದ ನೀರಿಗೆ ಕುಂದಾಗದಂತೆ, 11.20 ಲಕ್ಷ ಎಕರೆಗೂ ಮೀರಿದ ಪ್ರದೇಶಕ್ಕೆ ನೀರನ್ನು ಹರಿಸುವ ನಿರ್ಧಾರವನ್ನು, ಅಂತಿಮ ಆದೇಶದಲ್ಲಿ ಯಾವುದೇ ನಿರ್ಬಂಧ ಇಲ್ಲದೇ ಇರುವುದರಿಂದ ಕರ್ನಾಟಕ ರಾಜ್ಯವು ಕಾವೇರಿ ಪ್ರಾಧಿಕಾರಕ್ಕೆ ಪತ್ರ ಬರೆದು ತಿಳಿಸಿರುತ್ತದೆ.

3.0 ತಮಿಳುನಾಡು ರಾಜ್ಯವು ಸಿವಿಲ್ ಅಪೀಲ್‌ನ್ನು ಶೀಘ್ರವಾಗಿ ತೆಗೆದುಕೊಳ್ಳುವಂತೆ ತನ್ನ ಇತ್ತೀಚಿನ ಅರ್ಜಿಯಲ್ಲಿ ಸರ್ವೋಚ್ಛ ನ್ಯಾಯಾಲಯವನ್ನು ಕೋರಿದೆ. ಕರ್ನಾಟಕ ರಾಜ್ಯವೂ ಸಿವಿಲ್ ಅಪೀಲ್‌ನ ಶೀಘ್ರ ವಿಚಾರಣೆ ಬಗ್ಗೆ ಕಾತುರವಾಗಿದೆ. ಕರ್ನಾಟಕ ರಾಜ್ಯವು ತನ್ನ ಜಲಾಶಯಗಳಾದ ಕೆ.ಆರ್.ಎಸ್, ಕಬಿನಿ, ಹೇಮಾವತಿ ಮತ್ತು ಹಾರಂಗಿಯಲ್ಲಿ ಬೇಸಿಗೆ

ಬೆಳೆಗೆ ಅಧಿಕ ನೀರನ್ನು ಬಳಸುತ್ತಿದೆ ಎಂದು ತಮಿಳುನಾಡು ರಾಜ್ಯವು ಆಕ್ಷೇಪಿಸಿದೆ.

3.1 ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಸ್ಪೆಷಲ್ ಲೀವ್ ಪಿಟಿಷನ್‌ನ್ನು ತೆಗೆದುಕೊಂಡ ನಂತರ ಪ್ರಸ್ತುತ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿಯೂ ಸೇರಿದಂತೆ, ತಮಿಳುನಾಡು ರಾಜ್ಯವು ಇದೂವರೆಗೂ ನಾಲ್ಕು ಮಧ್ಯಕಾಲೀನ ಅರ್ಜಿಗಳನ್ನು ಸಲ್ಲಿಸಿದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅದರ ದಿನಾಂಕ: 18.10.2011 ರ ಆದೇಶದಲ್ಲಿ ಈ ಕೆಳಗಿನಂತೆ ಆದೇಶಿಸಿದೆ:

"All the other pending applications shall be listed along with the main appeals"

ಈ ಹಿನ್ನೆಲೆಯಲ್ಲಿ, ಬಹಳ ಚಾಣಾಕ್ಷತೆಯಿಂದ ರಾಜ್ಯವು ತನ್ನ ವಾದವನ್ನು ನಿರ್ವಹಿಸಬೇಕಾಗಿರುತ್ತದೆ. ಈ ವಿಷಯದ ಬಗ್ಗೆ ನಮ್ಮ ಕಾನೂನು ಮತ್ತು ತಾಂತ್ರಿಕ ವರದಿಗಳ ಅಭಿಪ್ರಾಯವು ಇದೇ ಆಗಿರುತ್ತದೆ.

4.0 ದಿನಾಂಕ: 05.02.2007ರ ನ್ಯಾಯಾಧೀಕರಣದ ಅಂತಿಮ ತೀರ್ಪಿನ ಅನುಗುಣವಾಗಿ ಕರ್ನಾಟಕವು ಅಂತರ ರಾಜ್ಯ ಗಡಿಯಲ್ಲಿರುವ ಬಿಳಿಗುಂಡ್ಲು ಜಲ ಮಾಪನಾ ಕೇಂದ್ರದಲ್ಲಿ ಸಾಲಿಯಾನ 192 ಟಿಎಂಸಿ ನೀರನ್ನು ಖಚಿತಪಡಿಸಲು ಆದೇಶಿಸಲ್ಪಟ್ಟಿರುತ್ತದೆ. ಸದರಿ ಆದೇಶದನು ಗುಣವಾಗಿ 192 ಟಿಎಂಸಿ ನೀರನ್ನು ರಾಜ್ಯದ ಗಡಿಯಲ್ಲಿ ಖಚಿತ ಮಾಡಿದ ನಂತರ ಉಳಿದ ನೀರನ್ನು ಉಪಯೋಗಿಸಲು ರಾಜ್ಯಕ್ಕೆ ಪೂರ್ಣ ಹಕ್ಕಿದೆಯೆಂದು ರಾಜ್ಯದ ಅಭಿಪ್ರಾಯವಾಗಿದೆ. ನೀರಾವರಿ ವಿಸ್ತೀರ್ಣ ಅಥವಾ ಅದರ ಕಾಲಾವಧಿ ಬಗ್ಗೆ ಯಾವ ತರಹ ನಿರ್ಬಂಧ ಇರುವುದಿಲ್ಲ. ನೀರಿನ ಪ್ರಮಾಣದಲ್ಲಿ ತಮಿಳುನಾಡು ರಾಜ್ಯಕ್ಕೆ ಯಾವ ರೀತಿಯ ಕುಂದೂ ಇರುವುದಿಲ್ಲ ಎಂಬುದು ಕಳೆದ 5 ವರ್ಷಗಳ ಅಂಕಿಅಂಶಗಳಿಂದ ಗಮನಿಸಬಹುದಾಗಿದೆ.

ಕ್ರಮ ಸಂಖ್ಯೆ	ಜಲ ವರ್ಷ ಜೂನ್–ಮೇ	ಬಿಳಿಗುಂಡ್ಲು ಜಲಮಾಪನಾ ಕೇಂದ್ರದಲ್ಲಿ ಕೇಂದ್ರ ಜಲ ಆಯೋಗ ಅಳತೆ ಮಾಡಿರುವ ನೀರಿನ ಪ್ರಮಾಣ (ಟಿಎಂಸಿ)
1	2007–08	353.64
2	2008–09	209.42
3	2009–10	219.49
4	2010–11	209.77
5	2011–12 (ದಿನಾಂಕ:21.03.2012ರವರೆಗೆ)	226.27

5.0 ತಮಿಳುನಾಡು ಸರ್ಕಾರವು ಪ್ರಸ್ತುತ ಸಲ್ಲಿಸಿರುವ ಇತ್ತೀಚಿನ ಮಧ್ಯಂತರ ಅರ್ಜಿಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇನ್ನೂ ವಿಚಾರಣೆಗೆ ಕೈಗೆತ್ತಿಕೊಂಡಿರುವುದಿಲ್ಲ. ಆದರೂ ಸಹ, ಕರ್ನಾಟಕ ಸರ್ಕಾರವು ಕಾನೂನು ಮತ್ತು ತಾಂತ್ರಿಕ ತಂಡದವರೊಂದಿಗೆ ಚರ್ಚಿಸಿ ಸೂಕ್ತ ಪ್ರತ್ಯುತ್ತರ ಗಳನ್ನು ತಯಾರಿಸಿ, ಸೂಕ್ತ ಸಮಯದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುತ್ತಿದೆ. ಸರ್ಕಾರವು ತನ್ನ ದಾವೆಯನ್ನು ಸಮರ್ಥಿಸಿಕೊಳ್ಳಲು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ವಿಶೇಷ ದಾವೆ (ಎಸ್.ಎಲ್.ಪಿ) ಬಗ್ಗೆ ಹಾಗೂ ನ್ಯಾಯಾಧಿಕರಣದಲ್ಲಿ ಸಲ್ಲಿಸಿರುವ ದಾವೆಗಳ ಬಗ್ಗೆ ಪ್ರಗತಿಯನ್ನು ಮುತುವರ್ಜಿ ವಹಿಸಿ ನಿರ್ವಹಿಸಲಾಗುತ್ತಿರುತ್ತದೆ. ಕಾವೇರಿ ಕೊಳ್ಳದ ರೈತರ ಹಿತದೃಷ್ಟಿಯನ್ನು ರಕ್ಷಿಸಲಾಗುವುದು. ಅಂತರ್ ರಾಜ್ಯ ಜಲವಿವಾದ ವಿಷಯ ಬಂದಾಗ ರಾಜ್ಯದಲ್ಲಿ ಇಲ್ಲಿಯತನಕ ನಡೆದು ಬಂದಿರುವ ಪ್ರತೀತಿಯಂತೆ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟುಗೂಡಿ ಒಗ್ಗಟ್ಟಿನಿಂದ ತೀರ್ಮಾನವನ್ನು ತೆಗೆದುಕೊಳ್ಳಲಾಗುತ್ತಿದೆ. ಆದ್ದರಿಂದ, ನಾನು ಎಲ್ಲಾ ಸದನದ ಮುಖಂಡ ರುಗಳು, ರಾಜಕೀಯ ಪಕ್ಷಗಳು, ರೈತ ಮುಖಂಡರುಗಳು ಮತ್ತು ಈ ಘನ

ಸದನದ ಪ್ರತಿಯೊಬ್ಬ ಮಾನ್ಯ ಸದಸ್ಯರುಗಳು ಈ ವಿಷಯದಲ್ಲಿ ಸರ್ಕಾರದ ಜೊತೆಗೂಡಿ ಒಗ್ಗಟ್ಟಾಗಿರಲು ಮನವಿ ಮಾಡಿಕೊಳ್ಳುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ತಮಿಳುನಾಡು ಸರ್ಕಾರವು ನಮ್ಮ ನ್ಯಾಯಾಧಿಕರಣದ ಅಂತಿಮ ತೀರ್ಪು ಬಂದ ಮೇಲೆ ಐದನೇ I.A, ನ್ನು ಹಾಕಿದೆ. ಅದಕ್ಕೂ ಮುಂಚೆ ನಾಲ್ಕು I.A, ಗಳನ್ನು ಹಾಕಿತ್ತು. ಎಲ್ಲಾ I.A, ಗಳು ಕೂಡ ಎಸ್.ಎಲ್.ಪಿ. ಜೊತೆಯಲ್ಲಿಯೇ ತೀರ್ಮಾನವಾಗಲಿ ಎನ್ನುವ ರೀತಿಯಲ್ಲಿಯೇ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆ. ಈ I.A, ಯಲ್ಲಿಯೂ ಕೂಡ ಅವರು ಬೇಸಿಗೆ ಕಾಲದಲ್ಲಿ ನಾವು ನೀರನ್ನು ಬಳಕೆ ಮಾಡಬಾರದು ಎನ್ನುವ ಪ್ರಮುಖ ಉದ್ದೇಶವಿದ್ದರೂ ಕೂಡ, ಅವರ ಒಂದು ಕಂಪ್ಲೆಂಟ್ ಸುಪ್ರಿಂ ಕೋರ್ಟ್ ಮೇಲೆಯೇ ಜಾಸ್ತಿಯಿದೆ. ಪದೇ ಪದೇ I.A, ಹಾಕಿದರೂ ಕೂಡ ಸುಪ್ರಿಂ ಕೋರ್ಟ್ ಅದನ್ನು ಪರಿಗಣಿಸುತ್ತಿಲ್ಲ ಎನ್ನುವ ನಿಲುವನ್ನೂ ಕೂಡ ಅವರು ತೆಗೆದುಕೊಂಡಿದ್ದಾರೆ. ಅವರ ಒಟ್ಟಾರೆ ಉದ್ದೇಶ ವೇನೆಂದರೆ ಮೊದಲನೆಯದಾಗಿ ನಮ್ಮ ನೀರಿನ ಬಳಕೆಯನ್ನು restrict ಮಾಡಬೇಕು. ಎರಡನೇಯದಾಗಿ ಆದಷ್ಟು ಬೇಗನೆ ಎಸ್.ಎಲ್.ಪಿ.ಯನ್ನು hear ಮಾಡಬೇಕು. ನಾವು ಎಸ್.ಎಲ್.ಪಿ.ಯಲ್ಲಿ ನಮಗೇನು ಅನ್ಯಾಯ ವಾಗಿದೆ ಎಂದು ಕೇಳಿದ್ದೇವೆ, ಉದಾಹರಣೆಗೆ ಹೇಳುವುದಾದರೆ ನಾವು ಕೇಳಿರುವುದು 465 ಟಿ.ಎಂ.ಸಿ. ನೀರಿನ ಬೇಡಿಕೆಯಿತ್ತು. ಆದರೆ ನಮಗೆ ಅಂತಿಮವಾಗಿ Tribunal 270 ಟಿ.ಎಂಸಿ. ನೀರಿಗೆ ಅಲೋಕೇಷನ್ ಕೊಟ್ಟಿದೆ. ಸುಮಾರು 195 ಟಿ.ಎಂ.ಸಿ. ನೀರನ್ನು ನಮ್ಮ ಬೇಡಿಕೆಗಿಂತ ಕಡಿಮೆ ಕೊಟ್ಟಿದೆ. ಒಟ್ಟಾರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಸುಮಾರು 26 ಲಕ್ಷ ಹೆಕ್ಟೇರ್ ನೀರಾವರಿ ಮಾಡುವ ಉದ್ದೇಶ ನಮಗಿತ್ತು. ಮಧ್ಯಂತರದಲ್ಲಿ ಅದನ್ನು 11.2ಕ್ಕೆ restrict ಮಾಡಿದ್ದರು. ಅಂತಿಮ ವರದಿಯಲ್ಲಿ 270 ಟಿ.ಎಂ.ಸಿ. ನೀರಿನಲ್ಲಿ 18.85ನ್ನು ತಾವು ಬಳಕೆ ಮಾಡಬಹುದು ಎಂದು ತೀರ್ಪನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಸುಮಾರು 7 ಲಕ್ಷ 15 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಕಾವೇರಿ ಜಲಾನಯನ ಪ್ರದೇಶದಲ್ಲಿ ನಮಗೆ ತೊಂದರೆಯಾಗುತ್ತಿದೆ. ಈ ಎರಡು ಪ್ರಮುಖ ಬೇಡಿಕೆಗಳನ್ನು ಡೈಲ್ಯೂಟ್ ಮಾಡುವುದಕ್ಕೆ ಆಗಾಗ್ಗೆ ಈ ತರಹದ interim application ಗಳನ್ನು ಹಾಕುತ್ತಿದ್ದಾರೆ. ನಾವು ನಮ್ಮ ಕಾನೂನು ತಜ್ಞರು ಹಾಗೂ ನಾರಿಮನ್ ಜೊತೆ ಈಗಾಗಲೇ ಚರ್ಚೆ ಮಾಡಿದ್ದು, ಇದಕ್ಕೆ

ಸೂಕ್ತವಾದಂತಹ ಉತ್ತರವನ್ನು ನಾವು ಕೊಡುತ್ತೇವೆ. ಖಂಡಿತವಾಗಿಯೂ ಏನು ತೊಂದರೆಯಾಗುವುದಿಲ್ಲ. ನಮ್ಮ ವಾದವನ್ನು ನಾವು ರಕ್ಷಣೆ ಮಾಡುತ್ತೇವೆ. ಅಷ್ಟೇ ಅಲ್ಲದೆ ಎಸ್.ಎಲ್.ಪಿ. ಯಲ್ಲಿ ಈ I.A, ಗಳನ್ನು ಏಕೆ ಹಾಕಿದ್ದಾರೆ ಎನ್ನುವ ಬಗ್ಗೆಯೂ ಕೂಡ ನಾವು fight ಮಾಡುತ್ತೇವೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ನಮ್ಮ ನಾರಿಮನ್ ಹಾಗೂ ಲೀಗಲ್ ಸದಸ್ಯರೆಲ್ಲರೂ ಕೂಡ ತಿಳಿಸಿದ್ದಾರೆ. We have already prepared the answer for what they have raised ಮತ್ತು ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಅದು 205 ಟಿ.ಎಂ.ಸಿ. interim ಇರಬಹುದು, 192 ಟಿ.ಎಂ.ಸಿ. ಅಂತಿಮವಾಗಿರಬಹುದು, ನಾನು ಆಗಲೇ ಹೇಳಿದಂತೆ ಎಲ್ಲಿಯೂ ಕೂಡ Month, ವಾರ, season, restrictions ಇಲ್ಲ. ಬೇಸಿಗೆಯಲ್ಲಿ ನಾವು ಬಳಕೆ ಮಾಡಬಾರದು ಎಂದು ಹೇಳುವುದಕ್ಕೆ ತಮಿಳುನಾಡು ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. They are trying to bring this new issue. ಅವರಿಗೆ ಈಗಾಗಲೇ ಗೊತ್ತಾಗಿದೆ. 2007ನೇ ಸಾಲಿನಿಂದಲೂ, ಅಂತಿಮ ತೀರ್ಪು ಬಂದ ಮೇಲೆ ನಾವು ನೀರು ಬಿಟ್ಟಿರುವ ಪ್ರಮಾಣವನ್ನು ನೋಡಿದಾಗ ಅವರಿಗೆ ಎಲ್ಲಿಯೂ ಕೂಡ ಅವಕಾಶವಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ Cauvery River Authority ಎಂಬ ಒಂದು Forum ಇದೆ. ಅವರಿಗೇನಾದರೂ ನೀರು ಕಡಿಮೆ ಆಗಿದ್ದರೆ ಖಂಡಿತವಾಗಿಯೂ ಅವರು ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಹೋಗಬಹುದಾಗಿತ್ತು, ಮಾನ್ಯ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆಯಬೇಕಾಗಿತ್ತು. ಆದರೆ ಆ ರೀತಿಯ ಅವಕಾಶವಿಲ್ಲ. CRA ಯನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲವೆಂದು ಗೊತ್ತಾಗಿ, ಅವರು ನಮಗೆ ಹೆಚ್ಚಿನ ನೀರಿನ ಪಾಲು ಸಿಗಬಾರದು, ಹೆಚ್ಚಿನ ನೀರಾವರಿ ಪ್ರದೇಶ ಕರ್ನಾಟಕಕ್ಕೆ ಸಿಗಬಾರದು, ಎಸ್.ಎಲ್.ಪಿ.ಯಲ್ಲಿ ತೊಂದರೆ ಮಾಡಬೇಕು ಎನ್ನುವ ಒಂದು ದುರುದ್ದೇಶದಿಂದ ಇವತ್ತು ಅವರು ಪದೆ ಪದೇ I.A. ಗಳನ್ನು ಹಾಕುತ್ತಿದ್ದಾರೆ. ಅದೆಲ್ಲವನ್ನೂ ನಾವು fight ಮಾಡುತ್ತಾ ಬಂದಿದ್ದೇವೆ. ಇಲ್ಲಿ ಗಮನಿಸಬೇಕಾದುದು ಏನೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬಹಳ ಸ್ಪಷ್ಟವಾಗಿ ಇವುಗಳನ್ನು contingency ಗೆ ತೆಗೆದುಕೊಂಡಿಲ್ಲ. ಇಲ್ಲದಿದ್ದರೆ I.A, ನ್ನು hear ಮಾಡಿ, ನಮಗೆ ನೋಟೀಸ್ ಕೊಟ್ಟು ಬೇಕಾದರೆ

ಇಂಟೆರಿಮ್ ಆರ್ಡರ್‌ನ್ನು ಅವರು ಕೊಡಬಹುದಿತ್ತು. ಈ ಸಾರಿ ತೆಗೆದು ಕೊಂಡಿರುವ I.A, ವಿಚಿತ್ರವಾಗಿದ್ದು ಬೇಸಿಗೆ ಕಾಲದಲ್ಲಿ ನೀರನ್ನು ಉಪಯೋಗ ಮಾಡಬೇಡಿ ಎಂಬ ಒಂದು ಹೊಸ ಬೇಡಿಕೆ ಇದೆ. ಆದ್ದರಿಂದ ನಾವು ಒಂದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇವೆ. ಈ ನೀರನ್ನು ಬಳಕೆ ಮಾಡುವುದು ನಮಗೆ ಹಕ್ಕಿದೆ. Reservior ನಲ್ಲಿರುವ 192 ಟಿ.ಎಂ.ಸಿ. ನೀರನ್ನು ನಿಮಗೆ ಕೊಟ್ಟ ಮೇಲೆ ನಮಗೆ ಬಳಕೆ ಮಾಡುವ ಹಕ್ಕಿದೆ.

ನಮ್ಮ ಡ್ಯಾಮ್‌ಗಳಲ್ಲಿ ಕುಡಿಯುವ ನೀರಿನ component ಇದೆ. ಕುಡಿಯುವ ನೀರಿನ component ಇರುವುದರಿಂದ ಬೇಸಿಗೆ ಕಾಲದಲ್ಲಿ ನಾವು ಬಿಡಲೇಬೇಕಾಗುತ್ತದೆ. ಕುಡಿಯುವ ನೀರನ್ನು ಕೊಡಲೇಬೇಕಾಗುತ್ತದೆ ಮತ್ತು ವಿಶೇಷವಾಗಿ ಬೆಂಗಳೂರು ನಗರ ಒಂದು ದೊಡ್ಡ ನಗರ ಇದೆ. ಇವೆಲ್ಲಾವನ್ನು ಗಮನಿಸಿ ಅವರು ಈ ರೀತಿ ಆದಂಥ restriction ಮಾಡುವುದಕ್ಕೆ ಸಾಧ್ಯವಿಲ್ಲ. It is not only illegal, it is inhuman also. ಆದ್ದರಿಂದ ಇದನ್ನು ನಾವು ಬಹಳ ಸ್ಪಷ್ಟವಾಗಿ ಪ್ರತಿಪಾದನೆ ಮಾಡುತ್ತಿದ್ದೇವೆ. ಇದನ್ನು ಸದನದ ಗಮನಕ್ಕೆ ತರುತ್ತೇನೆ. ಮತ್ತು ಹಿಂದೆಲ್ಲವೂ ಕೂಡ ಈ ವಿಷಯ ಬಂದಾಗ ಬಹಳ ಸ್ಪಷ್ಟತೆಯಿಂದ ರಾಜ್ಯ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ನಾವು ಮುಂದೆ ಹೋಗಿದ್ದೇವೆ. ಅಂತಿಮ ತೀರ್ಪು ಬಂದಾಗಲೂ ಕೂಡ ಬಹಳಷ್ಟು ಚರ್ಚೆಯಾಯಿತು. ಬಹಳಷ್ಟು ಚರ್ಚೆಯಾಗಿ ನಾವು special leave petition ಹಾಕಬೇಕಾದರೆ ಕೊನೆಗೆ ಎಲ್ಲರೂ ಅವತ್ತಿನ opposition, Government ಎಲ್ಲಾವೂ ಸೇರಿ ಆ special leave petition ನ draft ಮಾಡಿಕೊಟ್ಟಿರುವಂಥಹ ಸನ್ನಿವೇಶ ತಮಗೆಲ್ಲಾ ಗೊತ್ತಿದೆ. ನೆನಪು ಮಾಡಿಕೊಡಲು ಇಚ್ಛೆಪಡುತ್ತೇನೆ. ಆ ಹಿನ್ನೆಲೆಯಲ್ಲಿ ರಾಜ್ಯದ ಹಿತಾಸಕ್ತಿ ಮತ್ತು ಕಾವೇರಿ ಜಲಾನಯನ ಪ್ರದೇಶದ ರೈತರ ಹಿತಾಸಕ್ತಿಗೆ ರಾಜ್ಯ ಸರ್ಕಾರ ಬದ್ಧ. ಅಷ್ಟೇ ಅಲ್ಲ, ಇಡೀ ಕರ್ನಾಟಕದ ಜನತೆ ಕೂಡ ಬದ್ಧವಾಗಿದೆ ಮತ್ತು ಎಲ್ಲಾ ಪಕ್ಷಗಳು ಒಂದಾಗಿ, ಒಂದೇ ಧ್ವನಿಯಲ್ಲಿ ನಾವು ತೀರ್ಮಾನ ಮಾಡುತ್ತೇವೆ. ಹಿಂದೆಯೂ ಮಾಡಿದ್ದೇವೆ ಮುಂದೆಯೂ ಮಾಡುತ್ತೇವೆ ಅನ್ನುವುದನ್ನು ಇವತ್ತು ಆ ಭಾಗದ ರೈತರಿಗೆ ಸದನದ ಮುಖಾಂತರ ಆ ಸಂದೇಶ ಕಳುಹಿಸಬೇಕು ಮಾನ್ಯ ಸಭಾಧ್ಯಕ್ಷರೆ. ಆ ನಿಟ್ಟಿನಲ್ಲಿ ಈ ಸದನ ತೀರ್ಮಾನ ಮಾಡಬೇಕೆಂದು ನಾನು ಮನವಿಯನ್ನು ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ನೀರಾವರಿ ಸಚಿವರು ಸರ್ಕಾರದ ಪರವಾಗಿ ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ ಮತ್ತು oral ಆಗಿ ಕೂಡ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತಮಿಳುನಾಡು ಯಾವಾಗಲೂ ಕೂಡ ನ್ಯಾಯದ ರೀತಿ ನಡೆದುಕೊಳ್ಳುವ ರಾಜ್ಯ ಅಲ್ಲ. ಕಾನೂನು ಪ್ರಕಾರ ನಡೆದುಕೊಳ್ಳಬೇಕು ಅನ್ನತಕ್ಕಂಥದ್ದು ಯಾವತ್ತೂ ಕೂಡ ತಮಿಳುನಾಡಿನವರ ತಲೆಯಲ್ಲಿ ಇರತಕ್ಕಂಥ ವಿಚಾರ ಅಲ್ಲ. ಕರ್ನಾಟಕಕ್ಕೆ ಅನ್ಯಾಯ ಮಾಡಬೇಕೆನ್ನುವುದನ್ನು ಯಾವತ್ತೂ ಅವರು ಪ್ರತಿಪಾದನೆ ಮಾಡಿಕೊಂಡು ಬಂದಿದ್ದಾರೆ. ನಮಗೆ 1920ನೇ agreement, ಅವತ್ತಿನಿಂದ ಇವತ್ತಿನವರೆಗೂ ಕರ್ನಾಟಕಕ್ಕೆ ಅನ್ಯಾಯ ಆಗುತ್ತಲೇ ಬಂದಿದೆ. ಆದರೂ ನಾವು ಸಹಿಸಿ ಕೊಂಡಿದ್ದೇವೆ. ಅವತ್ತೇನೋ ಬ್ರಿಟೀಷ್ ಸರ್ಕಾರ ಇತ್ತು, ತಮಿಳುನಾಡಿನವರಿಗೆ ಅನುಕೂಲವಾಯಿತು ಅನ್ನತಕ್ಕಂಥದ್ದು ಮತ್ತು 1920 agreement ಆಗಬೇಕಾದರೆನೇ it is illogical, not based on facts, not based on truth and one sided. ನಮ್ಮಲ್ಲಿ ಅವತ್ತು ಯಾರೂ ಕೂಡ ಇಲ್ಲಿ ಪ್ರಬಲವಾಗಿ ಇರಲಿಲ್ಲ. ತಮಿಳುನಾಡು, ಕಲ್ಕತ್ತ, ಬಾಂಬೆ, ದೆಹಲಿ ನಾಲ್ಕು ಕೇಂದ್ರಗಳನ್ನು ಆಡಳಿತ ಮಾಡುವಂಥ centre ಆಗಿ ಮಾಡಿಕೊಂಡಿದ್ದರು. ತಮಿಳುನಾಡಿನಲ್ಲಿ ಮದರಾಸ್ ಇತ್ತು. ಅದನ್ನೂ ಕೂಡ ಅವರ ಪರವಾಗಿ ಮಾಡಿಕೊಂಡಿದ್ದರು. ಅವತ್ತಿನಿಂದ ಇವತ್ತಿನವರೆಗೂ ನಾವು ಹೇಳಿಕೊಂಡೆ ಬಂದಿದ್ದೇವೆ. ದುರ್ದೈವ ಏನಾಗಿದೆ ಅಂದರೆ, ಯಾರಿಗೆ ಅನ್ಯಾಯವಾಗಿದೆ ಅವರದು ಅಂದರೆ ನಮ್ಮ ಕೂಗು ಕಡಿಮೆ ಆಗಿದೆ. ಯಾರು ನಮ್ಮ ಪಾಲನ್ನು ಲೂಟಿ ಮಾಡಿ ಕೊಂಡಿದ್ದಾರೆ, ದಕ್ಕಿಸಿಕೊಂಡಿದ್ದಾರೆ ಅವರ ಕೂಗೇ ಯಾವಾಗಲೂ ಜಾಸ್ತಿಯಾಗುತ್ತದೆ. ನೋಡಿ ಈಗ ಅನಗತ್ಯವಾಗಿ ಸುಪ್ರೀಂಕೋರ್ಟ್‌ಗೆ ಅರ್ಜಿ, I.A, ಹಾಕಿದ್ದಾರೆ. There is no need, there is no necessity. ಸುಮ್ಮನೆ ಕಿತಾಪತಿ ಮಾಡುವುದು, ಕ್ಯಾತೆ ತೆಗೆಯುವುದು. ಜಯಲಲಿತಾ ಅವರು ಯಾವಾಗ ಅಧಿಕಾರದಲ್ಲಿ ಇರಲಿ, ಹೀಗೇ ಮಾಡುತ್ತಾರೆ. ಯಾರಿಗೂ ಗೊತ್ತಿಲ್ಲ ಜಯಲಲಿತಾ ಅವರು ಕರ್ನಾಟಕದಲ್ಲಿ ಹುಟ್ಟಿದವರಾಗಿದ್ದಾರೆ. ಜಯಲಲಿತಾ ಅವರಿಗೆ ಕರ್ನಾಟಕದ ಬಗ್ಗೆ prejudice ಇರಬೇಕೆಂದು ಕಾಣಿಸುತ್ತದೆ. ಅವರ ಅವ್ವ ಮಂಡ್ಯದವರು, ಅವರ ಅಪ್ಪ ಮೈಸೂರಿನವರು. ಅವರು ಮಹದೇವಪ್ಪ

ನವರ constituency ಎಂದು ಕಾಣುತ್ತದೆ. ಆದರೆ, ಯಾವುದಾದರೂ ಆಗಲಿ ಅವರು ಮುಖ್ಯಮಂತ್ರಿ ಆದಾಗೆಲ್ಲಾ ಇದೇ ಕಿತಾಪತಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : More loyal than the king ಎನ್ನುವಂತೆ ಆಗಿದೆ. ಬಹುಶಃ ಎಲ್ಲೋ ಜಯಲಲಿತಾ ಅವರಿಗೆ ನಾನು ಕರ್ನಾಟಕದವಳು, ಕನ್ನಡದವಳು ಅನ್ನತಕ್ಕಂಥ guilt ಇದೆ ಎನ್ನುವಂತೆ ಕಾಣಿಸುತ್ತದೆ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ : ತಮಿಳುನಾಡನ್ನು impress ಮಾಡುತ್ತಾರೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಭಾಧ್ಯಕ್ಷರೇ, ವಿರೋಧ ಪಕ್ಷದ ನಾಯಕರಿಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮದುವೆ ಆಗದೆ ಇರುವವರ ಸ್ವಭಾವ ಇದೇ ರೀತಿ ಇರುತ್ತದೆ.

ಶ್ರೀ ಸಿದ್ದರಾಮಯ್ಯ : ಹೌದಾ? ನಿಮಗೆ ಹೇಗೆ ಗೊತ್ತಾಯಿತು ಇದು? ನನಗೆ ಇದು ಗೊತ್ತಿರಲಿಲ್ಲ ಮಾನ್ಯ ಕಾರಜೋಳವರೆ, ನಿಮಗೆ ಅನುಭವ ಹೇಗೆ ಬಂತು? ಸಮೀಕ್ಷೆನೋ ಅಥವಾ experiment ಮಾಡಿದ್ದಾರೋ? There are two things. ಸಮೀಕ್ಷೆ ಬೇರೆ, experiment ಬೇರೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಭಾಧ್ಯಕ್ಷರೇ, ಮಾಯಾವತಿಯವರು, ಮಮತಾ ಬ್ಯಾನರ್ಜಿಯವರು, ಜಯಲಲಿತಾ ಅವರುಗಳು ಅವಿವಾಹಿತರು.

ಶ್ರೀ ಬಂಡೆಪ್ಪ ಖಾಶೆಂಪೂರ್ : ಅಟಲ್ ಬಿಹಾರಿ ವಾಜಪೇಯಿ, ಮೋದಿ, ಉಮಾಭಾರತಿ ಇವರುಗಳ್ಯಾರಿಗೂ ಮದುವೆ ಆಗಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮದುವೆ ಆಗದೆ ಇರುವ ಹೆಣ್ಣುಮಕ್ಕಳ ವಿಚಾರವೇ ಬೇರೆ ಇರುತ್ತದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಲಕ್ಷಾಂತರ ಹೆಣ್ಣುಮಕ್ಕಳು ಮದುವೆ ಆಗದೆ ಇರುವವರು ಇದ್ದಾರೆ. ಅವರ್ಯಾರೂ ಕೂಡಾ ಈ ರೀತಿ ಆಡುವುದಿಲ್ಲ. She is suffering from some disease ಅಂಥ ಕಾಣಿಸುತ್ತದೆ. I don't know what type of disease she is suffering from. But the question is, 2007ರ ಜುಲೈ ತಿಂಗಳಿನಲ್ಲಿ ಏನು ಕಾವೇರಿ ನ್ಯಾಯಾಧೀಕರಣ

ತೀರ್ಪು ಕೊಟ್ಟಿತ್ತು. ಅದು ನಮಗೆ ದೊಡ್ಡ ಅನ್ಯಾಯ ಆಯಿತು. 1990–91, 1991–1992ರಲ್ಲಿ ಕೊಟ್ಟಂಥ Interim ಆದೇಶ ಕೂಡ ಅನ್ಯಾಯ. ಅದಕ್ಕೆ logic ಇಲ್ಲ, Legal back up ಇಲ್ಲ, ಜೊತೆಗೆ facts ಇಲ್ಲ. ಆದರೂ ಅವರಿಗೆ ಅನ್ಯಾಯವಾಗುತ್ತಾ ಬಂದಿದೆ. ನಾವು ನೋಡಿ, ಅನ್ಯಾಯ ಆದರೂ ಸುಮ್ಮನೆ ಇದ್ದೇವೆ. ನಾವು store ಮಾಡಿರುವ ನೀರನ್ನು ಅವರಿಗೆ ಕೊಡಬೇಕು. ಅಣೆಕಟ್ಟುಗಳನ್ನು ಕಟ್ಟಿಕೊಂಡು, ಕಬಿನಿ, ಹಾರಂಗಿ, ಹೇಮಾವತಿ, ಕೆ.ಆರ್.ಎಸ್. 4 ಜಲಾಶಯಗಳಲ್ಲಿ ನಾವು ಕೋಟ್ಯಂತರ ರೂಪಯಿಗಳನ್ನು ಖರ್ಚು ಮಾಡಿ, ನೀರನ್ನು ಶೇಖರಣೆ ಮಾಡಿ ಅವರಿಗೆ ಕೊಡಬೇಕು. ಇದು ಯಾವ ನ್ಯಾಯ ನನಗಂತೂ ಅರ್ಥವಾಗುತ್ತಿಲ್ಲ. ಇದು natural justice ಅಲ್ಲ. ನಮಗೆ 197 ಟಿ.ಎಂ.ಸಿ. ನೀರನ್ನು ಬಿಳಿಗುಂಡ್ಲುನಲ್ಲಿ ಕೊಡಬೇಕೆಂದು ಅಂತಿಮ ಆದೇಶದಲ್ಲಿ ಹೇಳಿದ್ದಾರೆ. ನೀರು ಬಿಟ್ಟಿರುವ ಅಂಕಿಅಂಶಗಳನ್ನು ನೋಡಿದರೆ, ಅದಕ್ಕಿಂತ ಹೆಚ್ಚಾಗಿ ನೀರು ಹೋಗಿದೆ. Then where is the case for Tamil Nadu? Final award ನಲ್ಲಿ ಇದನ್ನೆಲ್ಲಾ ಹೇಳಿಲ್ಲ. ಕಾವೇರಿ ನ್ಯಾಯಾಧಿಕರಣದ award ನಲ್ಲಿ ಇವತ್ತು ಅವರು ಸುಪ್ರೀಂಕೋರ್ಟ್‌ಗೆ I.A. ಹಾಕಿ ಏನು ಕೇಳಿದ್ದಾರೆಂದರೆ, ಫೆಬ್ರವರಿಯಿಂದ ಮೇ ವರೆಗೆ ನೀರು ಬಳಸಬಾರದೆಂದು ನಿರ್ಬಂಧ ಹಾಕಬೇಕು. ಕರ್ನಾಟಕ ಅವರ ಅಧೀನದಲ್ಲಿ ಇದೆಯೋ ಏನೋ ನನಗೆ ಗೊತ್ತಾಗಲಿಲ್ಲ. ಕರ್ನಾಟಕ independent ರಾಜ್ಯವೆಂದು ಅವರು ತಿಳಿದುಕೊಂಡಿದ್ದಾರೋ ಏನೋ ಗೊತ್ತಿಲ್ಲ. ಏನು ತಮಿಳುನಾಡು ಒಂದೇನಾ independent state? Ours is also independent State, we are also members of the Republic of this Country. ನನಗೆ ಅರ್ಥವಾಗಲಿಲ್ಲ, ಒಕ್ಕೂಟದಲ್ಲಿ ನಾವೂ ಇದ್ದೇವೆಂದು ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಾಗುತ್ತಿಲ್ಲ. ಅವರ ಹಾಗೆ ಕರ್ನಾಟಕದವರು ಕೂಡ ಒಬ್ಬರು ಸದಸ್ಯರು. ಅವರು ದಬ್ಬಾಳಿಕೆ ಮಾಡಲಿಕ್ಕೆ ಹೋದರೆ ಅದನ್ನೆಲ್ಲಾ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಇಲ್ಲಿ ಏನು ಹೇಳುತ್ತಾರೆಂದರೆ, ನಾವು ಫೆಬ್ರವರಿಯಿಂದ ಮೇ ವರೆಗೆ ಈ 4 ಜಲಾಶಯಗಳಲ್ಲಿ ನೀರು ಬಳಸಿಕೊಳ್ಳಬಾರದಂತೆ. Where is it? Where is such order from the Tribunal or from the Supreme Court. No such Order. Who are they to dictate us? This is too much. ಅವರಿಗೆ ಕಾನೂನು ಭಾಷೆಯಲ್ಲಿಯೂ ಸರಿಯಾಗಿ ಉತ್ತರ ಕೊಡಬೇಕು. ಬೇರೆ ಭಾಷೆಯಲ್ಲಿಯೂ ಕೂಡ ಅವರಿಗೆ ಉತ್ತರ ಕೊಡಬೇಕು.

ಅವರಿಗೆ ಅರ್ಥವಾಗುವುದಿಲ್ಲ. ನಾವು ಅವರ ಭಾಷೆಯಲ್ಲಿ ಅದಕ್ಕಿಂತ ಇನ್ನೂ ಕೆಟ್ಟ ಭಾಷೆಯಲ್ಲಿ ಅವರಿಗೆ ಹೇಳಬೇಕಾಗುತ್ತದೆ.

ಶ್ರೀ ಆರ್. ಅಶೋಕ್ : ಹೇಳಿ ಸಾರ್.

ಶ್ರೀ ಸಿದ್ದರಾಮಯ್ಯ : ನೀವು ಹೇಳಬೇಕು, ನಾನಾ ಹೇಳುವುದಾ? ಹೇಳಿ ಸಾರ್ ಅಂತ ನನಗೆ ಹೇಳಿ ನೀವು ಅಲ್ಲಿ ಕುಳಿತುಕೊಂಡರೆ ಹೇಗೆ? ನಿಮಗೆ, ಬೆಂಗಳೂರಿಗೆ ಕುಡಿಯುವ ನೀರು ಬೇಕೋ ಬೇಡವೋ? ಸರ್ಕಾರ ನೀವು ಹೇಳಬೇಕೆಂದು ನಾನು ಹೇಳುವುದು. ನಾವು ಅಲ್ಲಿ ಇದ್ದರೆ ನಾವು ಹೇಳುತ್ತೇವೆ. ಇದರಲ್ಲಿ ರಾಜಕೀಯ ಏನೂ ಇಲ್ಲ.

State interest is paramount interest. ಇವತ್ತು ನೋಡಿ ಅವರು ಹೇಗೆ ಸುಪ್ರೀಂಕೋರ್ಟ್‌ಗೆ ಅರ್ಜಿ ಹಾಕಿದ್ದಾರೆ. ಇನ್ನೂ ನಾವೇ SLP ಹಾಕಿದ್ದೇವೆ, ಅದು civil petition ಎಂದು treat ಮಾಡಿ ಇನ್ನೂ ಅದು argument ಗೆ ಬಂದೇ ಇಲ್ಲ. ಇನ್ನೊಂದು clarification ಕೇಳಿದ್ದೇವೆ.

ಶ್ರೀ ಬಸವರಾಜು ಬೊಮ್ಮಾಯಿ : ಅರ್ಜಿ ಹಾಕಿದ್ದೇವೆ.

ಶ್ರೀ ಸಿದ್ದರಾಮಯ್ಯ : ಅವರೂ ಹಾಕಿದ್ದಾರೆ, ನಾವು ಹಾಕಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ : 3 ರಾಜ್ಯ clarification section file ಹಾಕಿದ್ದರಲ್ಲಿ Tribunal ಏನು ಆದೇಶ ಮಾಡಿದೆಯೆಂದರೆ, ಈ SLP ತೀರ್ಮಾನ ಆಗುವವರೆಗೂ ಇದನ್ನು hear ಮಾಡುವುದಿಲ್ಲ. ಅದರ ಬಗ್ಗೆ ಅವರು objection ಹಾಕಿ ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಅದು reject ಆಗಿದೆ.

ಶ್ರೀ ಸಿದ್ದರಾಮಯ್ಯ : Yes I know, ಅದು reject ಆಗಿದೆ. ಸುಮ್ಮನೆ ಇರಬೇಕಲ್ಲ, 192 ಟಿಎಂಸಿ ಅದು ನಮಗೆ ಆದ ಅನ್ಯಾಯ, 192 ಟಿ.ಎಂ.ಸಿ. ನೀರು ವಾರಗಳಲ್ಲಿ ಇಷ್ಟು ಬಿಡಬೇಕು, ತಿಂಗಳುಗಳಲ್ಲಿ ಇಷ್ಟು ಬಿಡಬೇಕು, ಇಷ್ಟು ತಿಂಗಳಲ್ಲಿ ಇಷ್ಟು ತಿಂಗಳವರೆಗೆ ಬಿಡಬೇಕು, ನಾವು ಮಳೆ ಬರಲಿ, ಬರದೇ ಹೋಗಲಿ, ನೀರು ಕೊಡದೇ ಹೋದರೆ ಆಗಲೇ ಕೇಂದ್ರ ಸರ್ಕಾರದ ಹತ್ತಿರ ಹೊರಟು ಹೋಗಿ ನೋಡಿ ನಮಗೆ ನೀರು ಬಿಡಲಿಲ್ಲ ಅಂತ ಕುಳಿತುಕೊಳ್ಳುತ್ತಾರೆ. ಆದರೂ ನಾವು ಮಳೆ ಬಂದಾಗ ಹೆಚ್ಚು ನೀರನ್ನು ಹೇಗೆ ಹಿಡಿದುಕೊಳ್ಳುವುದಕ್ಕೆ ಆಗುತ್ತದೆ? ಜೊತೆಗೆ ನಮ್ಮ ಎಲ್ಲಾ ಜಲಾಶಯಗಳು ಕೂಡಾ silt up ಆಗಿವೆ. ಅದರ storage capacity ಏನಿತ್ತು, ಆ capacity

ಯಲ್ಲಿ ಈಗ ನಾವು store ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಕಾರಜೋಳ ರವರೇ, ಅದಕ್ಕಿಂತ ಬಹಳ ಕಡಿಮೆಯಾಗುತ್ತಿದೆ. ನಾವು ಹೇಗೋ ಅದನ್ನು ಉಪಯೋಗಿಸಿಕೊಂಡು ನಮ್ಮ ರೈತರಿಗೆ ಸಮಾಧಾನ ಮಾಡಿಕೊಂಡು ಬೆಳೆ ಬೆಳೆಯುತ್ತಿದ್ದೇವೆ, ಬದುಕುತ್ತಿದ್ದೇವೆ. ಇವರು ನಮ್ಮನ್ನು ಬದುಕುವುದಕ್ಕೂ ಬಿಡುವುದಿಲ್ಲ, ನಮ್ಮ ರೈತರನ್ನು ಬೆಳೆಯುವುದಕ್ಕೂ ಬಿಡುವುದಿಲ್ಲ. ನಾವು ಈ ರೀತಿಯ ಪರಿಸ್ಥಿತಿಯಲ್ಲಿದ್ದೇವೆ. ಇವತ್ತು ಇದು ಪತ್ರಿಕೆಯಲ್ಲಿ ದೊಡ್ಡ ಪ್ರಚಾರ ಆಗಿ ಹೋಗಿದೆ. ಅದು ಈಗ ಇಡೀ ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶದಲ್ಲಿರುವ ರೈತರೆಲ್ಲಾ ಏನು ಇದು ನಮಗೆ ಇಷ್ಟು ಅನ್ಯಾಯವಾಗುತ್ತಿದೆ ನಮ್ಮ ನೀರನ್ನೇ ಬಳಸಿಕೊಳ್ಳುವುದಕ್ಕೆ ಬಿಡುತ್ತಿಲ್ಲ, ಬಳಸಿಕೊಳ್ಳಬಾರದೆಂದು ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕಿದ್ದಾರೆ, ಏನು ಆಗುತ್ತದೋ ಎನ್ನುವ ದೊಡ್ಡ ಆತಂಕ ಇದೆ. ಅದಕ್ಕಾಗಿ ಈ ಸದನ ಇವತ್ತು ತೀರ್ಮಾನ ಮಾಡಬೇಕು. ಯಾವುದೇ ಕಾರಣಕ್ಕೂ ನಮಗೆ ಹೀಗೆ ಅನ್ಯಾಯ ಆಗಿದೆ, ಸುಪ್ರೀಂ ಕೋರ್ಟ್‌ನಲ್ಲಿ we are fighting for the justice ನಾವು ಇವತ್ತು ತಮಿಳುನಾಡಿನವರು ಏನು ಅರ್ಜಿ ಹಾಕಿದ್ದಾರೆ, ಆ ಅರ್ಜಿಯನ್ನು ತೀವ್ರವಾಗಿ ವಿರೋಧ ಮಾಡುತ್ತೇವೆ. Legally and politically ವಿರೋಧ ಮಾಡುತ್ತೇವೆ ಎನ್ನುವ ಇಚ್ಛಾ ಶಕ್ತಿಯನ್ನು ಇವತ್ತು ಸರ್ಕಾರ ಪ್ರದರ್ಶನ ಮಾಡಬೇಕು. ಜೊತೆಗೆ ನಾವೂ ಸಹ ನಿಮ್ಮ ಜೊತೆಯಲ್ಲಿ ಇರುತ್ತೇವೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. We stand by the Government, but ನಮ್ಮ ರೈತರ interest, ಈ ಭಾಗದ ರೈತರ ಹಿತ ಕಾಪಾಡುವ ಕೆಲಸವನ್ನು ನೀವು ಮಾಡಬೇಕು. ಅದಕ್ಕೆ ನಮ್ಮ ಎಲ್ಲಾ ಸಂಪೂರ್ಣ ಬೆಂಬಲ, ಸಂಪೂರ್ಣ ಸಹಕಾರ ಇದೆ. ನಮ್ಮ ರೈತರಿಗೆ ಇವತ್ತು ಆತಂಕ ಏನು ಬಂದಿದೆ, ನಿಮ್ಮ statement ನಿಂದ ಆ ಆತಂಕವನ್ನು ನೀವು ನಿವಾರಣೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಇನ್ನೂ ಜಬರ್‌ದಸ್ತ್ ಆಗಿ ಹೇಳಬೇಕು. ಜಯಲಲಿತಾ ಅವರಿಗಿಂತ ನಿಮ್ಮ ಧ್ವನಿ ಕಡಿಮೆ ಇರಬಾರದು.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಹೇಳಿದ್ದೀರಾ? ಇನ್ನು ಸ್ವಲ್ಪ ಜೋರಾಗಿ ಹೇಳಿ. ಕಾವೇರಿ ನೀರು ಮಂಡ್ಯ ಒಂದೇ ಅಲ್ಲ, ಬೆಂಗಳೂರಿಗೆ, ಮೈಸೂರಿಗೆ ಕುಡಿಯುವ ನೀರು ಬೇಕು. ಆ ಭಾಗದಲ್ಲೆಲ್ಲಾ ಏನಾಗಿದೆ ಎಂದರೆ, ಕಬಿನಿ ಅಣೆಕಟ್ಟು ಕಟ್ಟಿದ್ದೇವಲ್ಲ ಅಲ್ಲಿಗೆ ನೀರು ಕೇರಳದಿಂದ ಬರುತ್ತದೆ. ಆ ನೀರನ್ನೇ

ಪೂರಾ ಅವರಿಗೆ ಬಿಟ್ಟುಕೊಟ್ಟುಬಿಡಬೇಕು. ನಾವು store ಮಾಡುವುದು, ಅವರಿಗೆ ಬಿಟ್ಟು ಕೊಡುವುದು. ಇದು ಯಾವ ನ್ಯಾಯ ಎಂದು ನನಗಂತೂ ಅರ್ಥವಾಗುತ್ತಿಲ್ಲ. ಕೆ.ಆರ್.ಎಸ್. ಕೂಡಾ silt up ಆಗುತ್ತಿದೆ, ಹೇಮಾವತಿ ಕೂಡಾ silt up ಆಗುತ್ತಿದೆ, ಹಾರಂಗಿ ಇವತ್ತು silt up ಆಗುತ್ತಿದೆ. ನಮಗೆ ಯಾವ proposed irrigated area ಇತ್ತಲ್ಲ ಅಷ್ಟರಲ್ಲೇ ನಾವು irrigation ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆ ಬೇಸಿಗೆಯಲ್ಲಿ ಕೂಡಾ ಎಷ್ಟು ಬೆಳೆಯುತ್ತಾರೆ, ಬಹಳ ಕಡಿಮೆ. ಇವರು ಯಾರು ನಮ್ಮ ನೀರನ್ನು ಫೆಬ್ರವರಿಯಿಂದ ಮೇ ವರೆಗೆ ಬಳಸಿಕೊಳ್ಳಬೇಡಿ ಎಂದು ಹೇಳುವುದಕ್ಕೇ? ಅದಕ್ಕೆ ನಿರ್ಬಂಧ ಹಾಕಿ ಎಂದು ಸುಪ್ರೀಂ ಕೋರ್ಟಿಗೆ ಕೇಳುವುದಕ್ಕೆ ಇವರು ಯಾರು? Order ನಲ್ಲಿ ಇದೆಯೇ? ಎಲೂ ಇಲ್ಲ. ಮಾನ್ಯ ಅಧ್ಯಕ್ಷರೇ, ಇದು ಜನರಲ್ಲಿ ಆತಂಕ ಉಂಟು ಮಾಡುತ್ತಿದೆ. ಏಕೆಂದರೆ ಇದರಿಂದ ಹಿಂದೆಯೆಲ್ಲಾ ಅನೇಕ ಅನಾಹುತಗಳು ಆಗಿವೆ. Interim Order ಬಂದಾಗ ದೊಡ್ಡ ದೊಡ್ಡ ಗಲಾಟೆಗಳು ಬೆಂಗಳೂರಿನಲ್ಲಿ ಏನೇನಾಗಿದೆ ಎನ್ನುವುದು ಇಲ್ಲಿ ಇತಿಹಾಸ ಆಗಿದೆ. ಜನಗಳಿಗೆ ಅವರ ಭಾವನೆಗಳನ್ನು ಕೆರಳಿಸುವುದು, ಜನಗಳ ನೆಮ್ಮದಿಯನ್ನು ಹಾಳು ಮಾಡುವುದು ಆಗುತ್ತಿದೆ. ನಮ್ಮ ಬೆಳೆ ಹಾಳಾಗಿ ಹೋದರೆ ಏನು ಮಾಡುವುದು? ಬರಗಾಲ ಬೇರೆ, ಈಗ ನಮ್ಮ ಕಡೆ ಬರಗಾಲ ಇದೆ. ಬರಗಾಲವಿದ್ದಾಗ pro rata ಹಂಚಿಕೆ ಆಗಬೇಕು ಎಂದು ಹೇಳಿದ್ದಾರೆ. ಆದರೂ ನೀರು ಹೆಚ್ಚಾಗಿ ಕೊಟ್ಟಿದ್ದಾರೆ. pro rata ಹಂಚಿಕೆಯಾಗ ಬೇಕೆಂದು interim Order ನಲ್ಲಿ clarification ಕೊಟ್ಟು ಹೇಳಿದ್ದಾರೆ. ಇಷ್ಟೆಲ್ಲಾ ಕರ್ನಾಟಕದ ಪರ ಇದ್ದರೂ ಕೂಡ ತಮಿಳುನಾಡಿನವರು ಸುಪ್ರೀಂ ಕೋರ್ಟಿಗೆ ಹೋಗಿರುವುದನ್ನು ನೋಡಿದರೆ ಏನೆಂದು ಕರೆಯಬೇಕು ಇವರಿಗೆ? ಆದ್ದರಿಂದ ಸರ್ಕಾರ ಒಂದು ಗಟ್ಟಿಯಾದ ನಿಲುವನ್ನು ತೆಗೆದುಕೊಳ್ಳಬೇಕು. ರೈತರಿಗೆ ಇವತ್ತು ಬಂದಿರುವ ಆತಂಕ ನಿವಾರಣೆ ಆಗುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಸುಪ್ರೀಂ ಕೋರ್ಟ್‌ನಲ್ಲಿ ಅದು hearing ಗೆ ತೆಗೆದುಕೊಳ್ಳಲಿ ಅಥವಾ ಬಿಡಲಿ, ನೀವು objection ಹಾಕುವಾಗ ಎಲ್ಲಾ legal opinion, technical opinion ಪಡೆದು objection ಸರಿಯಾದ ರೀತಿಯಲ್ಲಿ ಕೂಡಲೆ ಮಾಡುತ್ತೀರಿ ಎನ್ನುವ ವಿಶ್ವಾಸವಿದೆ. ಆ ಕೆಲಸ ಮಾಡಬೇಕು. ಆ ಮೂಲಕ ತಮಿಳುನಾಡಿನ ಜನರಿಗೆ

ಸರಿಯಾದ ಉತ್ತರ ರವಾನೆ ಆಗಬೇಕು, ಈ ಸದನದಿಂದ ಕರ್ನಾಟಕದ ನಮ್ಮ ಜನರಿಗೆ ಸರಿಯಾದಂಥ, ಅವರ ಆತಂಕ ನಿವಾರಣೆ ಮಾಡುವಂಥ ರೀತಿಯಲ್ಲಿ ನಮ್ಮ ಮಾತುಗಳು ಅವರಿಗೆ ಹೋಗಬೇಕು. ನಿಮ್ಮ ಸರ್ಕಾರದ ನಿಲುವು ಪ್ರಕಟ ಆಗಬೇಕು ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಸನ್ಮಾನ್ಯ ಸಭಾಧ್ಯಕ್ಷರೆ, ಕಾವೇರಿ ವಿಚಾರದಲ್ಲಿ ಇವತ್ತು ತಮಿಳುನಾಡು ಸರ್ಕಾರ ಪದೇ ಪದೇ ತೊಂದರೆ ಕೊಡುತ್ತಿದೆ. ಏಕೆಂದರೆ 1920ನೇ ಇಸವಿಯಿಂದ ಇಲ್ಲಿಯವರೆಗೆ ಸುಪ್ರೀಂ ಕೋರ್ಟ್ ಇರಬಹುದು, ನ್ಯಾಯಾಧಿಕರಣ ಇರಬಹುದು, ಹಲವಾರು ಆದೇಶಗಳನ್ನು ನೀಡಿದೆ. ಈಗಾಗಲೇ ಮಾನ್ಯ ನೀರಾವರಿ ಸಚಿವರು ಒಂದು ಹೇಳಿಕೆಯನ್ನು ನೀಡಿದ್ದಾರೆ. ಇವತ್ತು 1990ರಲ್ಲಿ ನ್ಯಾಯಾಧಿಕರಣ ಮಾಡಿದ್ದೆ ತಪ್ಪು ಎಂದು ನಾವು ನಿರ್ಣಯವನ್ನು ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಹೇಮಾವತಿ ಇರಬಹುದು, ಹಾರಂಗಿ, ಕಬಿನಿ, ಕೆ.ಆರ್.ಎಸ್. ಡ್ಯಾಮ್ ಇರಬಹುದು, ಆ ಭಾಗದಲ್ಲಿ ಯಾವುದೇ ಒಂದು ಸಣ್ಣ ಕೆಲಸ ಮಾಡಬೇಕಾದರೆ, ಯಾವುದಾದರೂ lift irrigation ಗೆ ನಮ್ಮ ನೀರನ್ನು ಬಳಸಬೇಕಾದರೆ ನ್ಯಾಯಾಧಿಕರಣದಿಂದ ಇವತ್ತು ತೊಂದರೆಯಾಗುತ್ತಿದೆ. ಕೆಲವು ಕಡೆ ಇವತ್ತು ಟ್ರಿಬ್ಯುನಲ್ ಆದೇಶ ಬರುವುದಕ್ಕಿಂತ ಮುಂಚೆ ಕೆಲವು ಕಾಮಗಾರಿಗಳು ಬಾಕಿ ಉಳಿದಿದ್ದು ಪೂರ್ಣ ಮಾಡುವುದಕ್ಕೆ ಆಗುತ್ತಿಲ್ಲ. ಆದರೆ ಇವತ್ತು ಏನಾಗಿದೆ ಎಂದರೆ ತಮಿಳುನಾಡು ಸರ್ಕಾರ ಪದೇ ಪದೇ ಕರ್ನಾಟಕದ ರೈತರ ಬಗ್ಗೆ, ಅದರಲ್ಲೂ ಕಾವೇರಿ ಬೇಸಿನ್ ರೈತರ ಬಗ್ಗೆ ಒಂದು ದುರಾದೃಷ್ಟ ಎಂದು ಹೇಳಬೇಕಾಗುತ್ತದೆ, ಏಕೆಂದರೆ ಯಾವ ರೀತಿ ಹೇಳಬೇಕು, ಯಾವ ರೀತಿ ಇದನ್ನು ಪರಿಗಣನೆ ಮಾಡಬೇಕೋ ನನಗೆ ಗೊತ್ತಿಲ್ಲ. ಪದೇ ಪದೆ ನಮ್ಮ ರೈತರು, ಕರ್ನಾಟಕ ದವರು ಸ್ವಲ್ಪ ತಾಳ್ಮೆಯ ಜನ ಎನ್ನುವ ದೃಷ್ಟಿಯಿಂದ ತಮಿಳುನಾಡು ಸರ್ಕಾರ ಇವತ್ತು ಬೇಕು ಎಂದು ಹೇಳಿ ಕರ್ನಾಟಕದ ಜನತೆಯನ್ನು ಕೆರಳಿಸಬೇಕು, ಈ ಭಾಗದ ರೈತರ ಭಾವನೆಯನ್ನು ಕೆರಳಿಸಬೇಕು ಎನ್ನುವ ಭಾವನೆ ಇದೆ. ಇವತ್ತು ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮುಂದೆ ಪದೇ ಪದೇ ಹೋಗುತ್ತಿರುವುದರಿಂದ, ನಾವು ಈ ಸದನದಿಂದ ಒಂದು ಖಂಡನಾ ನಿರ್ಣಯ ಮಾಡಬೇಕಾಗುತ್ತದೆ ಮತ್ತು ಇದಕ್ಕೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕಾಗುತ್ತದೆ. ಏಕೆಂದರೆ 1990ರಲ್ಲಿ ಕೇಂದ್ರ ಸರ್ಕಾರ

ಟ್ರಿಬ್ಯುನಲ್ ರಚನೆ ಮಾಡುವಾಗ NDA Government ಇತ್ತು. 1990 ರಲ್ಲಿ ಮಾಡಿರುವ ತಪ್ಪು. ಏಕೆಂದರೆ ನ್ಯಾಯಾಧಿಕರಣ ಮಾರಬಾರದಿತ್ತು. ಕಾವೇರಿ ಭಾಗದ ಜಲಾಶಯ ಒಂದು ಕಡೆ, ಇವತ್ತು ಕೃಷ್ಣಾ ಬೇಸಿನ್‌ನಲ್ಲಿ ಏನಿದೆ ಎಂದು ನೋಡುತ್ತಿದ್ದೀರಿ, ಆ ಭಾಗದ ಜನ ಯಾವ ರೀತಿ ನೀರನ್ನು ಉಪಯೋಗಿಸುತ್ತಿದ್ದಾರೆ ಎಂದು ಗೊತ್ತಿದೆ. ಏಕೆಂದರೆ ನ್ಯಾಯಾಧಿಕರಣದ ಆದೇಶ ಇದ್ದರೂ ಕೂಡಾ ಇವತ್ತು ಸಾವಿರಾರು ಕೋಟಿ ಹಣ ಖರ್ಚು ಮಾಡುತ್ತಿದ್ದಾರೆ. ಅದೇ ರೀತಿ ನಮ್ಮಲ್ಲಿ ಏನಾಗಿದೆ ಎಂದರೆ ಈ ಕಾವೇರಿ ಬೇಸಿನ್ ಎಂದರೆ ಸ್ವಲ್ಪ ಮಲತಾಯಿ ಧೋರಣೆ ಎಂದೇ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಏನಾದರೂ ಕೆಲಸ ಮಾಡಬೇಕೆಂದರೆ ಕಾವೇರಿ ಬೇಸಿನ್‌ನಲ್ಲಿ, 1967ರಲ್ಲಿ ಒಂದು ಖಾಸಗಿ ನಿರ್ಣಯವನ್ನು ಸಹ ಈ ಸದನದಲ್ಲಿ ಮಂಡಿಸಿದ್ದಾರೆ ಎನ್ನುವುದನ್ನು ತಮಗೆ ಮನವರಿಕೆ ಮಾಡುತ್ತಿದ್ದೇನೆ. ಸನ್ಮಾನ್ಯ ದೇವೇಗೌಡರು 1967ರಲ್ಲಿ ಒಂದು ಖಾಸಗಿ ನಿರ್ಣಯವನ್ನು ಮಾಡಿದ್ದರು. ನೀರಾವರಿ ಯೋಜನೆಗಳು ಇವತ್ತು ನಮ್ಮ ಹೇಮಾವತಿ ಅಣೆಕಟ್ಟು ಇರಬಹುದು, ಹಾರಂಗಿ, ಕಬಿನಿ ಜಲಾಶಯಗಳಲ್ಲಿ 100ಕ್ಕೆ 90 ಭಾಗ ನೀರು ತಮಿಳುನಾಡಿಗೆ ಹೋಗುತ್ತಿದೆ. 10% ನೀರನ್ನೂ ಸಹ ನಮ್ಮ ರಾಜ್ಯ ಉಪಯೋಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇವತ್ತು ಸರ್ಕಾರ ಪಕ್ಷಾತೀತವಾಗಿ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ. ತಮಿಳುನಾಡು ಸರ್ಕಾರ ಈ ರೀತಿ ಪದೇ ಪದೇ ಸುಪ್ರೀಂ ಕೋರ್ಟ್ ಮುಂದೆ ಹೋಗುತ್ತಿರುವುದು ಮತ್ತು ಬೇಕಂತಲೇ ದುರುದ್ದೇಶದಿಂದ ಈ ಕೆಲಸ ಮಾಡುತ್ತಿರುವುದರಿಂದ, ಇದರ ಬಗ್ಗೆ ಈ ಸದನ ತಮಿಳುನಾಡು ಸರ್ಕಾರದ ಮೇಲೆ ಒಂದು ಖಂಡನಾ ನಿರ್ಣಯ ಮಾಡಬೇಕಾಗುತ್ತದೆ. ಜೊತೆಗೆ ಕೇಂದ್ರ ಸರ್ಕಾರ ಇರಬಹುದು, ಸುಪ್ರೀಂ ಕೋರ್ಟಿಗೆ ಸರಿಯಾದ ರೀತಿಯಲ್ಲಿ ಮಾಹಿತಿಯನ್ನು ಸಹ ಸರ್ಕಾರ ಒದಗಿಸಬೇಕಾಗುತ್ತದೆ. ಈ ರಾಜ್ಯದಲ್ಲಿ ಎಷ್ಟು ಸಾವಿರ ಹೆಕ್ಟೇರ್ ನೀರಾವರಿ ಪ್ರದೇಶವಿದೆ ಎಂದರೆ 11.2 ಲಕ್ಷ ಹೆಕ್ಟೇರ್. ಕೆಲವು ಕಡೆ ಬರೀ ಅಚ್ಚುಕಟ್ಟು ಪ್ರದೇಶ ಎಂದು announce ಮಾಡಿದ್ದಾರೆ. ಆದರೆ ಅಚ್ಚುಕಟ್ಟು ಆಗೇ ಇಲ್ಲ. ಇವತ್ತು ಕೆಲವು ಕಡೆ ಸುಮ್ಮನೆ ನೀರು ಬಿಡುತ್ತೇವೆ ಎನ್ನುತ್ತಾರೆ ಅಷ್ಟು ಚೆನ್ನಾಗಿ ಆಗುತ್ತಿಲ್ಲ. ಅದರಿಂದ ನಮ್ಮ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮಗೆ ಏನು?

ಕೇಂದ್ರ ಸರ್ಕಾರ 10.07.2000ರಲ್ಲಿ ಮಾಡಿದ Tribunal ಆದೇಶದ ವಿರುದ್ಧ ಹೋಗಿದ್ದು, Supreme Court ಇದನ್ನು ತಿರಸ್ಕಾರ ಮಾಡಿದೆ. ತಿರಸ್ಕಾರ ಮಾಡಿದ ಮೇಲೂ ಪದೇ ಪದೇ ಹೋಗುತ್ತಿರುವುದು ದುರಾದೃಷ್ಟಕರ ಎಂದು ಹೇಳಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಕಾರಣದಿಂದಲೂ ಒಪ್ಪಬಾರದು. ಕೆಲವು ಕಡೆ ನೀರಿಲ್ಲ. ನಮ್ಮ ಹೇಮಾವತಿಯಲ್ಲಿ ನೀರಿಲ್ಲ. ಆದ್ದರಿಂದ ಹಾಸನ ನಗರದಲ್ಲಿ ಕುಡಿಯುವ ನೀರಿಲ್ಲ. ಕೆ.ಆರ್.ಎಸ್.ನಲ್ಲಿ ನೀರಿಲ್ಲ ಎಂದು ಇಂದು ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿದ್ದೇನೆ. ಬೆಂಗಳೂರು ನಗರಕ್ಕೆ ಕೆಲವು ಭಾಗದಲ್ಲಿ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ತೊಂದರೆ ಇದೆ. ಅದನ್ನು ಸರ್ಕಾರ ಮನವರಿಕೆ ಮಾಡಬೇಕಾಗುತ್ತದೆ. ಏನಾದರೂ ಹೆಚ್ಚು ಕಡಿಮೆ ಆದರೆ ರಾಜ್ಯ ಸರ್ಕಾರವೇ ಇದಕ್ಕೆ ಜವಾಬ್ದಾರಿಯಾಗುತ್ತದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳಿವೆ. ಎರಡೂ ರಾಷ್ಟ್ರೀಯ ಪಕ್ಷಗಳ ಜವಾಬ್ದಾರಿ ಇದೆ. ನಾವೇನು local, ನಮ್ಮ ರಾಜ್ಯದ ಪರವಾಗಿದ್ದೇವೆ. ಆದುದರಿಂದ ಕಾವೇರಿ ನಮ್ಮ ಕರ್ನಾಟಕಕ್ಕೆ ಏನಾದರೂ ಅನ್ಯಾಯವಾದರೆ, ಎರಡೂ ರಾಷ್ಟ್ರೀಯ ಪಕ್ಷಗಳು ಒಂದು ಕಡೆ ಭಾರತೀಯ ಜನತಾ ಪಕ್ಷ ಇರಬಹುದು, ಕಾಂಗ್ರೆಸ್ ಪಕ್ಷ ಇರಬಹುದು......

ಶ್ರೀ ಯು.ಟಿ. ಖಾದರ್ : ಇದರಲ್ಲಿ ಕೇಂದ್ರ ಸರ್ಕಾರ ಏನು ಮಾಡುವುದು?

(**ಗೊಂದಲ**)

ಸಭಾಧ್ಯಕ್ಷರು : ಅವರು ಮಾತನಾಡಲಿ. ಖಾದರ್‌ರವರೆ, ಕುಳಿತುಕೊಳ್ಳಿ. Please.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಇದರಲ್ಲಿ ರಾಜಕೀಯ ಬೆರೆಸುತ್ತಿಲ್ಲ. ಎರಡೂ ಪಕ್ಷಗಳಿರುವ ಈ ರಾಜ್ಯಕ್ಕೆ ಅನ್ಯಾಯ ವಾಗಿದೆ ಎಂಬುದನ್ನು ತಿಳಿಸುತ್ತಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ. ಮಂಗಳೂರಿನ ಸಾಹೇಬರಿಗೆ ನೀರಿನ ಉಪಯೋಗ ಬಳಸಿಕೊಂಡಿಲ್ಲ. ಮಂಗಳೂರು ಕರಾವಳಿಯಲ್ಲಿ, ನೀರಿನ ಬಗ್ಗೆ ಏನಾದರೂ ಆದರೆ ಅವರಿಗೇನು? ಈಗ ಕಾವೇರಿ ಹಾಗೂ ಕೃಷ್ಣ ಬೇಸಿನ್ ಏನು ಎನ್ನುವುದನ್ನು ಸಾಹೇಬರು ತಿಳಿದು ಮಾತನಾಡುವುದಕ್ಕೆ ಹೇಳಿ. ಅದನ್ನು ಬಿಟ್ಟು ಪಾಪ ಕಾವೇರಿ ಬೇಸಿನ್ ಬಗ್ಗೆ ಮಾತನಾಡುತ್ತಿದ್ದರೆ ಅವರಿಗೆ ಏನು? ಇವತ್ತು

ಎರಡೂ ಸರ್ಕಾರಗಳು ಕಚ್ಚಾಡಿ ಹೀಗಾಗಿರುವುದು. ಕೇಂದ್ರ ಸರ್ಕಾರ ಯಾವುದರ ಮೇಲೆ ನ್ಯಾಯಾಧಿಕರಣ ಮಾಡಿದ್ದರೆ? 50 ವರ್ಷ ಬೇಕಿತ್ತಾ? 50 ವರ್ಷಗಳಿಂದ ಆಡಳಿತ ನಡೆಸುತ್ತಾ ಇರುವವರು ಯಾರು?

(ಗೊಂದಲ)

ಡಾ: ಶರಣಪ್ರಕಾಶ್ ಪಾಟೀಲ್ : 50 ವರ್ಷಗಳಿಂದ ಯಾರ್‍ಯಾರು ಪ್ರಧಾನ ಮಂತ್ರಿಯಾಗಿದ್ದರೆಂಬುದು ಎಲ್ಲರಿಗೂ ಗೊತ್ತಿದೆ. ಪ್ರಧಾನ ಮಂತ್ರಿ ಯಾಗಿದ್ದಾಗ ಏನು ಮಾಡಿದ್ದಾರೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಡಾಕ್ಟರ್‌ರವರಿಗೆ ದೇವೇಗೌಡರು ಪ್ರಧಾನ ಮಂತ್ರಿಯಾಗಿ, ನೀರಾವರಿ ಮಂತ್ರಿಗಳಾಗಿ, ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಏನೇನು ಮಾಡಿದ್ದಾರೆಂಬುದನ್ನು ಕಡತ ತೆಗೆದು ನೋಡಲು ಹೇಳಿ. ದೇವೇಗೌಡರು ನಿರ್ಣಯ ಮಾಡದಿದ್ದರೆ ಕೃಷ್ಣಾ ಬೇಸಿನ್‌ಗೆ ದುಡ್ಡೇ ಬರುತ್ತಿರಲಿಲ್ಲ. 5 ಸಾವಿರ ಕೋಟಿ ಹಣ ಬರಬೇಕಾದರೆ ದೇವೇಗೌಡರೇ ಕಾರಣಕರ್ತರು ಎಂದು ತಿಳಿದುಕೊಳ್ಳುವುದಕ್ಕೆ ಹೇಳಿ. ಕೃಷ್ಣಾ ಬೇಸಿನ್‌ಗೆ 1964ರಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿ foundation ಹಾಕಿದ್ದು. ಕೇಂದ್ರ ಸರ್ಕಾರದಲ್ಲಿ ನೀರಾವರಿಗೆ ಹಣ ಕೊಡಬೇಕಾದರೆ ದೇವೇಗೌಡರು ಬರಬೇಕಿತ್ತಾ? ಅದನ್ನು ಬಿಟ್ಟು ರಾಜಕೀಯ ಬೆರೆಸಲು ಹೋಗುತ್ತಾರೆ. ಒಂದು ಸಾವಿರ ಕೋಟಿ ಹಣ ನಿಗದಿಪಡಿಸಿದ್ದು ಸಿದ್ದರಾಮಯ್ಯನವರು, ದೇವೇಗೌಡರು. ಆಗ ಹಣಕಾಸು ಮಂತ್ರಿಯಾಗಿದ್ದರು ಸಿದ್ದರಾಮಯ್ಯನವರು. ವಿಧಾನಸಭೆಯಲ್ಲಿ resolution ಮಾಡಿದ್ದು. 1964 ರಿಂದ ಮಾಡಬೇಡಿ ಎಂದು ಸಿದ್ದರಾಮಯ್ಯನವರು, ದೇವೇಗೌಡರು ಏನಾದರು ಹಿಡಿದು ಕೊಂಡಿದ್ದರೇನು? ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ನಿರ್ಣಯ ಮಾಡಲಾಗಿ ಇವತ್ತು ಕೃಷ್ಣಾ ಬೇಸಿನ್‌ಗೆ 2,700 ಕೋಟಿ ಹಣ ಬಂದಿದ್ದು. ಘಟಪ್ರಭಾ ಇರಬಹುದು. ಅದಕ್ಕೆ ರೂ.2900 ಕೋಟಿ. ಒಟ್ಟು ರೂ.5000 ಕೋಟಿ ಹಣ ಬಂದಿದೆ. ನಾವು ಮಾಡಬೇಡಿ ಎಂದು ಹಿಡಿದು ಕೊಂಡಿದ್ದೇವೇನು? 50 ವರ್ಷಗಳಿಂದ ಈ ರಾಜ್ಯದಲ್ಲಿ ಕಾವೇರಿ ಬೇಸಿನ್‌ಗೆ ಹೊಡೆದಾಟ ಮಾಡಲು ಯಾರು ಬಿಟ್ಟಿದ್ದಾರೆ ಹೇಳಿ. ನಾವು ಮಾತನಾಡಲು ಎದ್ದು ನಿಂತುಕೊಂಡರೆ ಆಗುವುದಿಲ್ಲ. ಇರುವುದನ್ನು ಇದ್ದಂತೆ ಹೇಳುತ್ತೇನೆ. ನಮ್ಮಲ್ಲಿ ರಾಜಕೀಯ ಬೇಡ. ಕೇಂದ್ರ ಸರ್ಕಾರ Interfere ಆಗಬೇಕು. ಇವತ್ತು

ಕೇಂದ್ರ ಸರ್ಕಾರ Parliament ನಲ್ಲಿ amendment ತರಲಿ. ಈ ರಾಜ್ಯಕ್ಕೆ ಅನ್ಯಾಯವಾಗಿದೆ. ಪದೇ ಪದೇ ಇವತ್ತು ನೀವು ಯಾವುದೇ ಸರ್ಕಾರ ಇರಲಿ ನೀರಾವರಿ ಮಂತ್ರಿ ಬಸವರಾಜ ಬೊಮ್ಮಾಯಿ ಇರಬಹುದು, ಸದಾನಂದ ಗೌಡರು ಇರಬಹುದು ಅದು ಬೇರೆ ವಿಷಯ. ಅದಕ್ಕಲ್ಲ ನಾನು ಹೇಳುವುದು. ಇಂದು ನಾವು ಈ ಸದನದಿಂದ ಪ್ರಧಾನ ಮಂತ್ರಿಗಳಲ್ಲಿ ಮನವಿ ಮಾಡಬೇಕಾಗುತ್ತದೆ. ಏಕೆಂದರೆ ಇದರಲ್ಲಿ ಪಕ್ಷ ಎನ್ನುವುದು ಬೇಡ. ಕಾವೇರಿ ಬೇಸಿನ್ ಜನ ಉಳಿಯಬೇಕು. ಕಬಿನಿಯಲ್ಲಿ ಡ್ಯಾಮ್ ಕಟ್ಟಬೇಕಾದರೆ ಯಾರು ಸ್ವಾಮಿ. ಹೇಮಾವತಿ ಇರಬಹುದು, ಹಾರಂಗಿ ಇರಬಹುದು. ದೇವೇಗೌಡರು 8 ವರ್ಷ ನೀರಾವರಿ ಮಂತ್ರಿಗಳಾಗಿ ಏನು ಕೆಲಸ ಮಾಡಿದ್ದಾರೆಂಬುದು ನನಗೆ ಗೊತ್ತಿದೆ. ಅದನ್ನು ನಾನು ಯಾರ ಕೈಯ್ಯಲ್ಲೂ ಹೇಳಿಸಿಕೊಳ್ಳಬೇಕಾದ್ದು ಇಲ್ಲ. ದಯಮಾಡಿ ಇವತ್ತು ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಬೇಕು. ಈ ಸದನದಲ್ಲಿ ನಾವು ಪಕ್ಷಾತೀತವಾಗಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕಾಗುತ್ತದೆ. ಅದರ ಜೊತೆಗೆ ಸುಪ್ರೀಂ ಕೋರ್ಟಿಗೂ ನಾವು ಮನವರಿಕೆ ಮಾಡಬೇಕಾಗುತ್ತದೆ. ನಾವು ಸುಮ್ಮನೆ ruling party ಯವರು ಅಥವಾ ನ್ಯಾಯಾಧೀಕರಣ ಇದನ್ನು ಹೇಳುವುದು ಬೇಡ. ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಈ ರಾಜ್ಯಕ್ಕೆ ಅನ್ಯಾಯವಾಗಿರುವುದನ್ನು ಸರಿಪಡಿಸಿ ಎಂದು ಪ್ರಧಾನ ಮಂತ್ರಿಗಳಿಗೂ ಒಂದು ನಿಯೋಗ ಹೋಗಬೇಕು. ಅದನ್ನು ಮಾನ್ಯ ಸಭಾಧ್ಯಕ್ಷರೆ ಮಾಡಬೇಕು. ಇದರಲ್ಲಿ ರಾಜಕೀಯ ಬೆರೆಸುವುದು ಏನೂ ಇಲ್ಲ. ದಯಮಾಡಿ ಕೃಷ್ಣಾ ಬೇಸಿನ್ ಇರಬಹುದು, ಕಾವೇರಿ ಬೇಸಿನ್ ಇರಬಹುದು. ಈ ರಾಜ್ಯಕ್ಕೆ ಕಳೆದ ನೂರಾರು ವರ್ಷಗಳಿಂದ ಅನ್ಯಾಯವಾಗಿರುವುದನ್ನು ಸರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಮುಂದೆ ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರದ ಮುಂದೆಯೂ ಹೇಳಬೇಕೆಂದು ನಾನು ಒತ್ತಾಯ ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಕಾವೇರಿ ನೀರಿನ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ತಮಿಳುನಾಡು ಸರ್ಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಒಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಇವತ್ತು ನಮ್ಮ ಹಾರಂಗಿ, ಹೇಮಾವತಿ, ಕೆ.ಆರ್.ಎಸ್. ನೀರನ್ನು ಬೇಸಿಗೆ ಕಾಲದಲ್ಲಿ ನಿರ್ಬಂಧ ಮಾಡಬೇಕೆಂದು ಹೇಳಿ ಅರ್ಜಿ ಹಾಕಿರುವುದನ್ನು ನೋಡಿದರೆ ಒಂದು ಹೊಸ ತರಹವಾದ ಅರ್ಜಿಯನ್ನು ಹಾಕಿದ್ದಾರೆ. ಅವರು ಹಾಕಿದ್ದ ಮಧ್ಯಂತರ

ಅರ್ಜಿಗಳನ್ನು ಸರ್ವೋಚ್ಚ ನ್ಯಾಯಾಲಯ ಈಗಾಗಲೇ ತಿರಸ್ಕಾರ ಮಾಡಿ ತಮಿಳುನಾಡು ಸರ್ಕಾರಕ್ಕೆ ನೀವು ಪದೇ ಪದೇ ಈ ರೀತಿಯಾಗಿ ಬರಬೇಡಿ ಎಂದು ಒಂದು ಸಂದೇಶ ಕೊಟ್ಟಿದೆ. ಹಾಕಿರುವ ಅರ್ಜಿಗಳನ್ನೆಲ್ಲಾ main petition ನಲ್ಲಿ hear ಮಾಡೋಣವೆಂದು ಹೇಳಿರುವಾಗ ಇವತ್ತು ಅರ್ಜಿ ಹಾಕಿದ್ದಾರೆಂದರೆ ಅದನ್ನೇ ಕ್ಯಾತೆ ತೆಗೆಯುವುದಕ್ಕೆ ಎಂದು ಹೇಳುವುದು. ತಮಿಳುನಾಡಿನ ಜಯಲಲಿತಾರವರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ಯಾವಾಗಲೂ ಕೂಡಾ ಅವರಿಗೆ ಇದೊಂದು ರಾಜಕೀಯ. ಇವತ್ತು ಕಾವೇರಿ ನೀರಿನ ಮೇಲೆ ತಮಿಳುನಾಡು ರಾಜಕೀಯ ನಿಂತಿರುವುದು. ಒಂದು emotional issue ತೆಗೆದುಕೊಂಡು fight ಮಾಡತಕ್ಕಂಥವರು. ಅವರಿಗೇನಾಗಿದೆ ಎಂದರೆ U.P.A. ನಲ್ಲಿ ಸದ್ಯಕ್ಕೆ entry ಇಲ್ಲ. ಅಲ್ಲಿ entry ಆಗಬೇಕು. ಏನಾದರೂ ಮಾಡಿ ಪ್ರಧಾನಮಂತ್ರಿಗಳ ಬಳಿ ಹೋಗಬೇಕೆಂಬ ಆಸೆ ಇದೆ. ಅವರು ಅಷ್ಟು ಸುಲಭವಾಗಿ ಚೆನ್ನೈ ಬಿಟ್ಟು ಹೋಗುವವರಲ್ಲ. ಈಗ ಅದಕ್ಕೊಂದು ನೆಪ ಮಾಡಿದ್ದಾರೆ. ನಾವು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಆಗಿರುವ ರಾಜಕೀಯ ಗೊಂದಲದ ಹಿನ್ನೆಲೆಯಲ್ಲಿ ಇವತ್ತು ಅಸ್ಥಿರತೆ ಇದೆ. ಅದರ ಲಾಭ ಪಡೆದುಕೊಳ್ಳಬೇಕೆಂಬ ರೀತಿಯಲ್ಲಿ ಈ ಕ್ಯಾತೆ ತೆಗೆದಿರಬಹುದು. ಹಾಕಿರುವ ಎಸ್.ಎಲ್.ಪಿ.ಗಳನ್ನು ಸುಪ್ರೀಂ ಕೋರ್ಟ್ ಸಾರಾಸಗಟಾಗಿ ತಿರಸ್ಕಾರ ಮಾಡಿರುವುದು ಗೊತ್ತಿಲ್ಲ ಎಂದಲ್ಲ. ಆದರೂ ಕೂಡಾ ಈ ರೀತಿಯಾಗಿ ಅರ್ಜಿಗಳನ್ನು ಹಾಕಿರುವ ಸಂದೇಶದ ಹಿನ್ನೆಲೆಯಲ್ಲಿ ನಾವೂ ಕೂಡಾ ಸಮರ್ಥವಾಗಿ ಕಾನೂನಿನ ಹೋರಾಟ ಮಾಡಬೇಕು. ನೀರಾವರಿ ವಿಚಾರದಲ್ಲಿ ರಾಜಕೀಯವಾಗಿ ನಾವೆಲ್ಲಾ ಒಗ್ಗಟ್ಟಾಗಿದ್ದೇವೆ ಎಂಬ ವಿಚಾರವನ್ನು ತಿಳಿಸಬೇಕಾಗುತ್ತದೆ. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಒಂದು ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ತಮಿಳುನಾಡು ಹಾಕಿರುವ Original petition ಏನಿದೆ, ತಮಿಳುನಾಡು ಇರಬಹುದು, ಕರ್ನಾಟಕ, ಪಾಂಡಿಚೇರಿ ಎಲ್ಲಾ ರಾಜ್ಯದವರು ಕೂಡಾ ಇವತ್ತು, ಕೇರಳದವರು ಹಾಕಿರುವ ಅರ್ಜಿ ಇನ್ನೂ 10 ವರ್ಷ ಗಳಾದರೂ ಇತ್ಯರ್ಥ ವಾಗುವುದಿಲ್ಲ. ಇತ್ಯರ್ಥವಾಗುವುದಿಲ್ಲವೆಂದರೆ ಅಲ್ಲಿಯವರೆಗೆ ನಾವು ಸುಮ್ಮನಿರುವುದೇನು? ಈಗಾಗಲೇ ಕೊನೆಯ ತೀರ್ಪಾಗಿ ಬಂದಿದೆ. 192 ಟಿ.ಎಂ.ಸಿ. ಯಲ್ಲಿ ಬಿಳಿಗೊಂಡಲುವಿನಲ್ಲಿ ಬಿಡುಗಡೆಗೊಂಡಿರುವುದನ್ನು ಬಿಟ್ಟು ಒಂದು ತೊಟ್ಟು ನೀರು ಕೊಡಬೇಕಿಲ್ಲ

ಎಂದು ಹೇಳಿರುವ ಹಿನ್ನೆಲೆಯಲ್ಲಿ ನಾವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೇವೆ? ನಾವು ಯಾವುದೇ ಕ್ರಮ ತೆಗೆದು ಕೊಳ್ಳುತ್ತಿಲ್ಲ. ಸುಪ್ರೀಂಕೋರ್ಟಿನಲ್ಲಿರುವ ಕೇಸ್ ಇನ್ನೂ 10 ವರ್ಷಗಳಾದರೂ ಬರುವುದಿಲ್ಲ. Dispute Act ಪ್ರಕಾರ ಒಂದು tribunal ತೀರ್ಮಾನ ಬಂದಾಗ usually ಸುಪ್ರೀಂಕೋರ್ಟ್ Interfere ಆಗುವುದಿಲ್ಲ. ಆದರೆ ಹಾಕುವುದಕ್ಕೆ ಅಧಿಕಾರವಿದೆ. ಅವರೂ ಹಾಕಿದ್ದಾರೆ, ಎಲ್ಲರೂ ಹಾಕಿದ್ದೇವೆ. ಅದು ಇತ್ಯರ್ಥವಾಗುವವರೆಗೆ ನಾವು ಸುಮ್ಮನೆ ಇರುವುದಕ್ಕೆ ಆಗುತ್ತದೆಯೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಯಾವುದೇ ಕಾಲದಲ್ಲಿಯೂ ಕೂಡಾ ಅಂತಿಮವಾಗಿ ಇರುವ 192 ಟಿ.ಎಂ.ಸಿ. ಗಿಂತ ಹೆಚ್ಚು ಒಂದು ಹನಿ ನೀರನ್ನು ಕೂಡಾ ತಮಿಳುನಾಡಿಗೆ ಬಿಡುವುದಿಲ್ಲ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ. ರಾಜಕೀಯವಾಗಿ ಇಚ್ಛಾಶಕ್ತಿ ಪ್ರದರ್ಶಿಸಬೇಕಾಗುತ್ತದೆ ಮತ್ತು ಆ ರೀತಿಯಾದ ಯೋಜನೆಗಳನ್ನು ನಾವು ಮಾಡಬೇಕಾಗುತ್ತದೆ.

ಆ ಪೂರಕವಾಗಿರತಕ್ಕಂತಹ ಯೋಜನೆಗಳನ್ನು ನಾವು ಏನಾದರೂ ಮಾಡಿದ್ದೇವಾ ಎಂದರೆ ಬಹುಶಃ ಎಲ್ಲವನ್ನು ಹೇಳುವ ರೀತಿ ನಾವು ಆ ಚಿಂತನೆಯನ್ನು ಮಾಡಿಲ್ಲ. ನಾವು ತಮಿಳುನಾಡಿಗೆ ನೀರು ಬಿಡಲೇಬೇಕಾಗುತ್ತದೆ. ಅದು ಸರಿಯೋ ತಪ್ಪೋ ಪ್ರಶ್ನೆ ಬೇರೆ. ತೀರ್ಪಿನ ಪ್ರಕಾರ ನೀರು ಬಿಡಬೇಕಾಗುತ್ತದೆ. ಬಿಡಬೇಕಾದಾಗ ನಮಗೆ ಪರ್ಯಾಯವಾಗಿ ಮಾರ್ಗಗಳು ಯಾವುವು ಇವೆ ಎನ್ನತಕ್ಕದ್ದನ್ನು ಕಂಡು ಹಿಡಿದುಕೊಳ್ಳಬೇಕಾಗುತ್ತದೆ. ಮೇಕೆದಾಟಿನ ಹತ್ತಿರ ಇವತ್ತು ನೀರಿನ ಸಂಗ್ರಹಣೆ ಮಾಡಬೇಕು ಎಂದು ಹಿಂದೆ ತೀರ್ಮಾನ ಆಗಿತ್ತು. ಅದಕ್ಕೆ ಏಕೆ ಇನ್ನೂ ಚಾಲನೆ ಕೊಡಲಿಲ್ಲ? ಮೇಕೆದಾಟಿನ ಹತ್ತಿರ ಸುಮಾರು 40 ರಿಂದ 45 ಟಿಎಂಸಿ ನೀರನ್ನು ನೀವು ಸಂಗ್ರಹಿಸಿ, ತಮಿಳುನಾಡಿಗೆ ಬಿಡುವುದಾದರೆ ಅವರಿಗೂ ಕೂಡ ಕಾಲಕಾಲಕ್ಕೆ ನೀರನ್ನು ಬಿಡುವುದರ ಜೊತೆಗೆ ನಾವು ಇವತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯತೆ ಇದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಏಕೆ ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ ಈಗಾಗಲೇ ನೀವು ಬಜೆಟ್‌ನಲ್ಲಿ ತುಮಕೂರು ಮತ್ತು ಈ ಭಾಗದ ವಿಚಾರದಲ್ಲಿ ಎತ್ತಿನಹೊಳೆ ಮಾರ್ಗದಲ್ಲಿ ನೀರು ಕೊಡುತ್ತೇವೆ ಎಂದು ಹೇಳಿದ್ದೀರಿ. ಎತ್ತಿನಹೊಳೆಯಿಂದ ನೀರಿಗಿಂತ ಹೆಚ್ಚಾಗಿ ನಮ್ಮ ಹೇಮಾವತಿಯಲ್ಲಿ ನೀರಿದೆ. ಆ ನೀರನ್ನು ಬಿಡಬೇಕು. ನಮ್ಮ ಭಯ ಏನು ಇದೆ ಎಂದರೆ ತಮಿಳುನಾಡಿಗೆ ನೀರು ಬಿಡಬೇಕು. ಆ

ಕಾರಣಕ್ಕೋಸ್ಕರ ನಾವು ಏನೂ ಮಾಡುವುದು ಬೇಡ. ಆ ಭಯವನ್ನು ಬಿಟ್ಟು ನಾವು ಈಚೆಗೆ ಬರಬೇಕಾಗುತ್ತದೆ. ಯಾವುದೇ ಕಾರಣದಿಂದಲೂ ಕೂಡ ಆ ನೀರನ್ನು ಬಳಸುವುದಕ್ಕೆ ನಾವು ಯೋಜನೆಗಳನ್ನು ಮಾಡೇ ಮಾಡುತ್ತೇವೆ. ಹೇಮಾವತಿಯಿಂದ ಕೆಆರ್‌ಎಸ್‌ಗೆ ನಾವು ನೀರನ್ನು ಕೊಡುವುದಿಲ್ಲ ಎನ್ನತಕ್ಕ ತೀರ್ಮಾನವನ್ನು ಮಾಡಿದಾಗ, ಯೋಜನೆಗಳನ್ನು ಅನುಷ್ಠಾನ ಮಾಡುವುದಕ್ಕೆ ಹೊರಟಾಗ ಮಾತ್ರ ಇದಕ್ಕೆ ಪರಿಹಾರ ಸಿಗಲು ಸಾಧ್ಯವಾಗುತ್ತದೆ. ನಾವು ಅದರ ಬಗ್ಗೆ ಯೋಚನೆ ಮಾಡದೇ ಇವತ್ತು ಸುಪ್ರೀಂ ಕೋರ್ಟಿನಲ್ಲಿ ಕೇಸು ಇದೆ ಎಂಬ ವಿಚಾರವನ್ನು ದೊಡ್ಡದಾಗಿ ಮಾಡಿ ಯಾವ ಯೋಜನೆಗಳನ್ನು ಕೂಡ ಮಾಡದೇ ಇರತಕ್ಕದ್ದು, ಇದು ಕರ್ನಾಟಕದ ಪಾಲಿಗೆ ಒಳ್ಳೆಯದಲ್ಲ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಯಾವುದೇ ಕಾರಣದಿಂದಲೂ ಕೂಡ ಹೇಳುವುದಾದರೆ ಒಂದು ಕೆಲಸ ಮಾಡಬಹುದು. ಕು. ಜಯಲಲಿತಾ ಅವರಿಗೆ ಈ ವಿಚಾರ ಗೊತ್ತಿಲ್ಲ ಎಂದಲ್ಲ. ಆದರೆ ನಾಳೆ ಪ್ರಧಾನಮಂತ್ರಿ ಮುಂದೆ ಕಾವೇರಿ ನ್ಯಾಯಾಧಿಕರಣದ ಮುಂದೆ ಅರ್ಜಿ ಹಾಕುವುದಕ್ಕೋಸ್ಕರ ದೂರುದಾರರ ಪರವಾಗಿ ಇವತ್ತು ಸುಪ್ರೀಂ ಕೋರ್ಟಿಗೆ ಅರ್ಜಿ ಹಾಕಿರುತ್ತಾರೆ. ಇಲ್ಲಿ ಚರ್ಚೆಗೆ ಬರುತ್ತದೋ ಬಿಡುತ್ತದೋ ಪ್ರಶ್ನೆ ಬೇರೆ. ಸುಪ್ರೀಂ ಕೋರ್ಟು ಯಾವುದೇ ಕಾರಣದಲ್ಲೂ ಕೂಡ ನಮ್ಮನ್ನು ಕೇಳದೇ ತೀರ್ಮಾನ ಮಾಡುವ ಪ್ರಶ್ನೆ ಇಲ್ಲ. ಈಗಾಗಲೇ ಹಿಂದಿನ ತೀರ್ಪಿನ ಪ್ರಕಾರ ಇವತ್ತು main petition ಪ್ರಕಾರ ತೀರ್ಮಾನ ಮಾಡಬೇಕು. ಏಕೆಂದರೆ original petition ನಲ್ಲಿ ಯಾವ issues ಅನ್ನು ತೆಗೆದು ಕೊಂಡಿದ್ದಾರೋ ಅದೇ issues ನಲ್ಲಿ ಇವತ್ತು ಮಧ್ಯಂತರ ಅರ್ಜಿಯನ್ನು ಹಾಕುತ್ತಿರತಕ್ಕದ್ದು. ಹಾಗಾಗಿ ಸುಪ್ರೀಂ ಕೋರ್ಟು ಕೂಡ ಇದನ್ನು ಪರಿಗಣಿಸುತ್ತದೆ ಎನ್ನತಕ್ಕದ್ದು ಇಲ್ಲ. ಆದರೆ ಕಾವೇರಿ ನ್ಯಾಯಾಧಿಕರಣದ ಮುಂದೆ ಹೋಗಿ ಗೊಂದಲವನ್ನು ಸೃಷ್ಟಿ ಮಾಡಬೇಕು ಎನ್ನತಕ್ಕ ಹುನ್ನಾರ ಇದೆ ಎನ್ನುವುದನ್ನು ನಾವು ಇವತ್ತು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗಾಗಿ ರಾಜಕೀಯವಾಗಿರತಕ್ಕಂತಹ ಪ್ರತ್ಯುತ್ತರವನ್ನು ಕೊಡಬೇಕು. ಇವರು ಹಾಕಿರತಕ್ಕಂತಹ ಮಧ್ಯಂತರ ಅರ್ಜಿಗೆ ಇವತ್ತು ಕಾನೂನಾತ್ಮಕವಾಗಿ ಉತ್ತರವನ್ನು ಕೊಡಬೇಕು ಎನ್ನತಕ್ಕದ್ದು ನನ್ನ ಒತ್ತಾಯ. ಎಲ್ಲೋ ಒಂದು ಕಡೆ ದಯಮಾಡಿ ನೀವು ಕುಳಿತು ಯೋಚನೆ ಮಾಡಿ. ನಮ್ಮ ನೀರು ಇರಬೇಕಾದಾಗ, ನಾವು ಇಲ್ಲಿಯವರೆಗೆ ಬಿಟ್ಟಿರತಕ್ಕಂತಹ ನೀರು ಎಷ್ಟು?

ನೀವು ಕೊಟ್ಟಿರತಕ್ಕಂತಹ ಅಂಕಿ ಅಂಶದ ಪ್ರಕಾರನೇ 192 ಟಿಎಂಸಿಗೂ ಹೆಚ್ಚು ನೀರು ಎಂದು ಹೇಳಿದರೆ, 2007–08ರಲ್ಲಿ 353 ಟಿಎಂಸಿ ನೀರು ಬಿಟ್ಟಿರತಕ್ಕದ್ದು. ಸುಮಾರು 60–62 ಟಿಎಂಸಿ ಹೆಚ್ಚು ನೀರು ಬಿಳಿಗುಂಡ್ಲುವಿನಿಂದ ಇವತ್ತು ತಮಿಳುನಾಡಿಗೆ ಹೋಗಿದೆ ಎಂದು ಹೇಳಿದರೆ ಅದು ಯಾರ ನೀರು? ಅದು ನಮ್ಮ ನೀರು. ಇವತ್ತು 2007–08ರಲ್ಲಿ ಅದಾದರೆ 2008–09 ರಲ್ಲಿ ಇವತ್ತು ಸುಮಾರು 20–30 ಟಿಎಂಸಿ ಹೆಚ್ಚುವರಿ ನೀರು ಬಿಟ್ಟಿದ್ದೇವೆ. 2009–10ರಲ್ಲಿ ಸುಮಾರು ಹೆಚ್ಚು ಕಡಿಮೆ 30 ಟಿಎಂಸಿ ನೀರು ಹೆಚ್ಚುವರಿ ಬಿಟ್ಟಿದ್ದೇವೆ. 2010–11ರಲ್ಲಿ ಕೂಡ ಸುಮಾರು 20 ಟಿಎಂಸಿ ನೀರು ಹೆಚ್ಚುವರಿ ಬಿಟ್ಟಿದ್ದೇವೆ. 2011–2012ರಲ್ಲಿ, ಈ ವರ್ಷದಲ್ಲಿ ಸಹ ಬರಗಾಲ ಇರುವಂತಹ ಸಂದರ್ಭದಲ್ಲೂ ನಾವು ಸುಮಾರು 35 ಟಿಎಂಸಿ ನೀರನ್ನು ಬಿಟ್ಟಿದ್ದೇವೆ. ಇದು ನಮ್ಮ ನೀರು. ಇವತ್ತು ನಮ್ಮ ನೀರನ್ನು ಈ ರೀತಿಯಾಗಿ ನಾವು Upper riparian State ಎನ್ನುವ ಒಂದೇ ಕಾರಣಕ್ಕೋಸ್ಕರ ಅನಗತ್ಯವಾಗಿರತಕ್ಕಂಥ ವಿವಾದಗಳನ್ನು ಮಾಡಿ ನಮ್ಮ ಯೋಜನೆಗಳಿಗೆ ತಡೆ ಒಡ್ಡತಕ್ಕದ್ದೇ ಅವರ ಉದ್ದೇಶವಾಗಿರುವುದರಿಂದ ಅದಕ್ಕೆ ನಾವು ಮಣಿಯಬಾರದು. ಹಾಗಾಗಿ ನಾವು ಯೋಜನೆಗಳನ್ನು ಮಾಡಬೇಕು. ಯೋಜನೆಗಳನ್ನು ಮಾಡಿ ಇವತ್ತು ಕೈಗೆತ್ತಿಕೊಳ್ಳುವ ಕೆಲಸವನ್ನು ಮಾಡಬೇಕು. ಬಹುಶಃ ನಾವು ಎಲ್ಲೋ ಒಂದು ಕಡೆ ಪಕ್ಷಾತೀತವಾಗಿ ಇರತಕ್ಕ ರೀತಿಯಲ್ಲಿ, ನಾವು ಎಲ್ಲಾ ಸಂದರ್ಭದಲ್ಲಿ ಅಲ್ಲ. ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ನೀರಿನ ವಿಚಾರದಲ್ಲಿ ನಿರ್ವಿವಾದ. ನಾವು ನಿಮ್ಮ ಜೊತೆಯಲ್ಲಿರುತ್ತೇವೆ. ನಿಮಗೆ ಸಹಕರಿಸುತ್ತೇವೆ. ಆದರೆ ಯಾವುದೇ ಕಾರಣದಿಂದಲೂ ಕೂಡ ಆ ನೀರನ್ನು ಬಳಕೆ ಮಾಡುವುದರ ಬಗ್ಗೆ ಚಿಂತನೆ ಮಾಡಬೇಕು. ಆದಕ್ಕೆ ಯೋಜನೆಗಳನ್ನು ಮಾಡಬೇಕು. ಆ ಯೋಜನೆಗಳನ್ನು ಮಾಡಬೇಕಾದಾಗ ಕೇಂದ್ರ ಸರ್ಕಾರದ ಮುಂದೆ ಹೋಗುವುದಕ್ಕೆ ಕೂಡ ನಾವು ಸಿದ್ಧರಾಗಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಪ್ರತಿಯೊಂದಕ್ಕೂ ಕೂಡ ಅವರು ಅಡ್ಡೆತಡೆಗಳನ್ನು ಮಾಡುತ್ತಿರುತ್ತಾರೆ. ಅದಕ್ಕೋಸ್ಕರ ನೀವು ಯೋಚನೆ ಮಾಡಬೇಕಾಗಿಲ್ಲ. ಅಷ್ಟೇ ಸಮರ್ಥವಾಗಿ ನಾವು ಕೂಡ ಕ್ಯಾತೆ ಮಾಡುವುದನ್ನು ಕಲಿಯಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ತಮಿಳುನಾಡಿನಲ್ಲಿ ಇವತ್ತೇನು 192 ಟಿಎಂಸಿ ಮೇಲೆ ಒಂದು ಡ್ರಾಪ್ ಬಿಡಬಾರದು ಎಂದು ಇದೆ, ನಮಗೆ ಹೆಚ್ಚಿನ ಬಳಕೆ ಆಗತಕ್ಕ ನೀರನ್ನು ನಾವು ಸಾರಾಸಗಟಾಗಿ ಬಿಡುತ್ತಿರತಕ್ಕದ್ದು ತಪ್ಪಾಗಿದೆ. ಅದಕ್ಕೆ

ಕಡಿವಾಣ ಹಾಕತಕ್ಕ ಕೆಲಸ ಮಾಡಿದರೆ ಬಹುಶಃ ನಾವು ಕೋರ್ಟಿಗೆ ಹೋಗುವುದಿಲ್ಲ. ನಾವು ಹೇಳಿದ್ದಕ್ಕೆ ಬರುತ್ತಾರೆ ಎನ್ನತಕ್ಕದ್ದನ್ನು ಒಪ್ಪಿಕೊಳ್ಳ ಬೇಕಾಗುತ್ತದೆ. ದಯಮಾಡಿ ನಾವು ಈ ವಿಚಾರದಲ್ಲಿ ಮಂತ್ರಿಗಳ, ಸರ್ಕಾರದ ಹೇಳಿಕೆಯನ್ನು ಒಪ್ಪುವುದರ ಜೊತೆಗೆ ನಾವು ಇಚ್ಛಾ ಶಕ್ತಿಯನ್ನು ಪ್ರದರ್ಶನ ಮಾಡತಕ್ಕ ರೀತಿಯಲ್ಲಿ ಕ್ರಮವನ್ನು ಜರುಗಿಸಬೇಕಾಗುತ್ತದೆ. ಅವರು ಮುಂದೆ ಮಾಡತಕ್ಕ ಪ್ಲಾನುಗಳಿಗೆ ಪರ್ಯಾಯವಾಗಿ ನಾವೇನು ಮಾಡಬೇಕು ಎನ್ನತಕ್ಕದ್ದನ್ನು ಕೂಡ ರಾಜಕೀಯವಾಗಿ ಮಾಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬಹುಶಃ ಈ ವಿಚಾರದಲ್ಲಿ ಪತ್ರಿಕೆಯಲ್ಲಿ ವಿಚಾರ ಬಂದಿದೆ. ಈಗಾಗಲೇ ಪೆಟಿಷನ್ ಹಾಕಿದ ತಕ್ಷಣ ಎಲ್ಲ ಪತ್ರಿಕೆಯಲ್ಲಿ ಬಂದು ಒಂದು ಗೊಂದಲ ಬಂದಿದೆ. ನಮಗೆ ಕಾವೇರಿ ವಿಚಾರ. ಜಯಲಲಿತಾ ಎಂದರೆ ನಮ್ಮಲ್ಲಿ ಏನಾಗಿ ಬಿಟ್ಟಿದೆ ಎಂದರೆ ಅವರ ವಿಚಾರ ಬಂತು, ಅವರು ಇಂದು ಅರ್ಜಿ ಹಾಕಿದರು ಎಂದರೆ ನಮ್ಮ ನೀರಿಗೆ ಕುತ್ತು ಬಂತು ಎನ್ನತಕ್ಕ ರೀತಿಯಲ್ಲಿ ಆಗುತ್ತದೆ. ಅಂತಿಮವಾಗಿ ಒಂದು ತೀರ್ಪು ನಮ್ಮ ಪರವಾಗಿ ಬಂದಿರುವುದರಿಂದ, ಆ ತೀರ್ಪಿನ ಪ್ರಕಾರ ಅವರಿಗೆ ಯಾವುದೇ ರೀತಿಯಲ್ಲಿ ಹಕ್ಕು ಇಲ್ಲ. ಕೇಳುವುದಕ್ಕೂ ಕೂಡ ಹಕ್ಕಿಲ್ಲ. Locus standi ಕೂಡ ಇಲ್ಲದೇ ಇರುವಾಗ, ಅವರು ತಕರಾರು ಮಾಡುವುದಕ್ಕೆ ಹೊರಟಿರುವಂತಹ ಸಂದರ್ಭದಲ್ಲಿ ನಾವು ಕೂಡ ಅಷ್ಟೇ ಸಮರ್ಥವಾಗಿ ಎದುರಿಸಲು ಎಲ್ಲ ರೀತಿಯಲ್ಲಿ ಸಜ್ಜಾಗಬೇಕು. ನಾವು ಯೋಜನೆಗಳನ್ನು ಮಾಡಬೇಕು. ಇವತ್ತು ದಯಮಾಡಿ ನಾನು ಹೇಳುತ್ತೇನೆ. ಪಕ್ಷಾತೀತವಾಗಿ ಎಲ್ಲರನ್ನೂ ಕರೆಯಿರಿ. ಈಗ ನಮ್ಮ ನೀರನ್ನು ಬಳಕೆ ಮಾಡಿಕೊಳ್ಳುವ ಬಗ್ಗೆ ನಾವೇನು ಮಾಡಬೇಕು ಎನ್ನತಕ್ಕದ್ದರ ಬಗ್ಗೆ ಚಿಂತನೆ ಮಾಡಿ. ಏಕೆ ಎಂದು ನನಗೆ ಅರ್ಥ ಆಗುತ್ತಿಲ್ಲ. ಮೇಕೆದಾಟು ಇರಬಹುದು. ಆ ಮೇಕೆದಾಟಿನಲ್ಲಿ ನಾವು ನೀರನ್ನು ಸಂಗ್ರಹಿಸಿ ಅದನ್ನು ಡ್ಯಾಂ ಕಟ್ಟತಕ್ಕದ್ದು, ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂತಹ ಕೆಲಸವನ್ನು ಮಾಡಬಹುದು. ಬಹುಶಃ ಮಾನ್ಯ ಸಚಿವೆಯಾದ ಶೋಭಾ ಅವರು ಇಲ್ಲಿದ್ದಾರೆ. ಇವತ್ತು ನಮಗೆ ವಿದ್ಯುಚ್ಛಕ್ತಿ ಇಲ್ಲ, ಕೋಲ್ ಇಲ್ಲ ಎಂದು ಹೇಳುತ್ತೀರಿ. ನಮ್ಮ ನೀರಿದೆ. ನಮ್ಮಲ್ಲಿ ವಿದ್ಯುಚ್ಛಕ್ತಿಯನ್ನು ಮಾಡುವುದಕ್ಕೆ ಸಾಧ್ಯ ಇದೆ. ನಮ್ಮಲ್ಲಿ ಯೋಜನೆ ಆಗಿದೆ. ಇದುವರೆಗೂ ಏಕೆ ಸಚಿವ ಸಂಪುಟದಲ್ಲಿ ಇಂತಹ ವಿಚಾರಗಳು ಚರ್ಚೆ ಆಗಿಲ್ಲ ಎಂದು ನನಗೆ ಗೊತ್ತಿಲ್ಲ. 2007ರಲ್ಲಿ ಬಂದ ತೀರ್ಪು, ಐದು

ವರ್ಷವಾದರೂ ಕೂಡ ಇನ್ನೂವರೆಗೆ ಕೂಡ ಸರ್ಕಾರಗಳಿಗೆ ಜ್ಞಾನೋದಯ ಆಗಿಲ್ಲ ಎಂದರೆ ನಾನೇನು ಹೇಳಬೇಕೋ ಅರ್ಥವಾಗಿಲ್ಲ. ಅಧ್ಯಕ್ಷರೆ, ಪರಿಸರವನ್ನು ಹಾಳು ಮಾಡಿಕೊಳ್ಳುತ್ತೀರಿ. ನೀರು ನೀವು ಕೊಡುತ್ತೀರಿ. ನಿಮ್ಮ ನೀರನ್ನು ಇವತ್ತು ಮಜಾ ಮಾಡುತ್ತಿರುವವರು ಬೇರೆ ಯಾರೋ ಆಗಿದ್ದಾರೆ. ಶೇಕಡಾ 60 ರಷ್ಟು ಭಾಗ ಕರ್ನಾಟಕದಲ್ಲಿ ಹರಿಯತಕ್ಕ, ಹುಟ್ಟತಕ್ಕ ನೀರನ್ನು ನಾವು ಬಳಕೆ ಮಾಡಿಕೊಳ್ಳುತ್ತಿರುವುದನ್ನು ನೋಡಿದರೆ ಏನೇನೂ ಇಲ್ಲ ಎಂದು ಮೂಲತಃ ಅರ್ಥ ಮಾಡಿಕೊಳ್ಳದೇ ನಾವು ಏನೋ ಪ್ರಶ್ನೆ ಬಂತು, ಏನೋ ಉತ್ತರ ಕೊಟ್ಟೆವು ಎಂದು ಹೇಳಿದರೆ ಆಗುವುದಿಲ್ಲ. ಇವತ್ತು ನಮ್ಮ ಇಚ್ಛಾ ಶಕ್ತಿಯನ್ನು ಪ್ರದರ್ಶನ ಮಾಡತಕ್ಕ ರೀತಿಯಲ್ಲಿ ಸರ್ಕಾರ ಬರಬೇಕು ಎನ್ನತಕ್ಕ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಜಯಚಂದ್ರ ಅವರು ಹೇಳಿದ ಹಾಗೆ ಬಹಳ emotional issue ತೆಗೆದುಕೊಂಡು ನಾವು ಚರ್ಚೆ ಮಾಡುತ್ತಿದ್ದೇವೆ. ಈ ಗಡಿ ಭಾಷೆ ಮತ್ತೆ ನೀರಿನ ಸಮಸ್ಯೆ ಬಹಳ ಸೂಕ್ಷ್ಮವಾದಂತಹದು ಕೂಡ. ಏನಾಗುತ್ತದೆ ಇದರ ಪರಿಣಾಮ ಎಂದು ಹೇಳಿ ನಮಗೆ ಗೊತ್ತಿದೆ. ಈ ಕಾವೇರಿ ನೀರಿನ ವಿವಾದದ ಬಗ್ಗೆ ನಾವು ಚರ್ಚೆ ಮಾಡುತ್ತೇವೆ. ಏಕೆಂದರೆ ಮೊನ್ನೆ ತಮಿಳುನಾಡಿನವರು ಸುಪ್ರೀಂ ಕೋರ್ಟಿಗೆ ಮನವಿ ಮಾಡಿದ್ದಾರೆಂದು ಹೇಳಿ ನಾವು ಚರ್ಚೆ ಮಾಡುತ್ತೇವೆ. ಏಕೆಂದರೆ ಈ ಸಮಸ್ಯೆ ಬಿಗಡಾಯಿಸಿದಂತಹ ಸಂದರ್ಭದಲ್ಲಿ ನಾವೆಲ್ಲಾ ಪಾರ್ಲಿಮೆಂಟಿನಲ್ಲಿದ್ದಂತಹವರು. ನಾವು ಕರ್ನಾಟಕದವರು Tribunal constitute ಮಾಡಬೇಡಿ ಎಂತಲೇ ಹೇಳಿದ್ದು. By way of negotiation ಆಗಬೇಕು. ಮಾತುಕತೆ ಮುಖಾಂತರ ಕೂಡ ಹಿಂದಿನಿಂದ ನೀರಿನ ಹಂಚಿಕೆ ಆಗಬೇಕು ಎಂದು ನಾವು ಮಾಡಿಕೊಂಡು ಬಂದಂತಹದು. ನೀರಿನ ಸಮಸ್ಯೆ ಬರುತ್ತಿದ್ದುದು distress period ನಲ್ಲಿ. ಸಂಕಷ್ಟ ಪರಿಸ್ಥಿತಿಯಲ್ಲಿ ನೀರನ್ನು ಹೇಗೆ ಹಂಚಿಕೆ ಮಾಡಿಕೊಳ್ಳಬೇಕು ಎಂಬ ಪ್ರಶ್ನೆ. ಒಳ್ಳೆಯ ಮುಂಗಾರು ಆಗಿ, ಈಗ ಮಾನ್ಯ ಜಯಚಂದ್ರ ಅವರು ಹೇಳುತ್ತಿರತಕ್ಕ 300 ಟಿಎಂಸಿ ನೀರು ಬಿಟ್ಟಿರತಕ್ಕದ್ದು ಅವೆಲ್ಲಾ ಮಳೆ ಬಂದು ಹರಿದು ಹೋದಾಗ ಬಿಳಿಗುಂಡ್ಲುವಿನಿಂದ ಬಿಟ್ಟಿರತಕ್ಕದ್ದು. ನಮ್ಮ ನೀರೇ. ನಾವು upper riparian area ದಲ್ಲಿದ್ದೇವೆ. ಸುಪ್ರೀಂ ಕೋರ್ಟು ಆಗಲೀ ಟ್ರಿಬ್ಯುನಲ್ ಆಗಲೀ ಅವರು ಕೂಡ ಹೇಳಿರುವುದು Cauvery water is a nature's gift ಎಂದು

ಹೇಳಿರತಕ್ಕದ್ದು. ನಿಜ. Cauvery delta ದಲ್ಲಿ ನಮ್ಮದೇ ಹೆಚ್ಚಿಗೆ ಹರಿಯತಕ್ಕ ಪ್ರದೇಶ ಇದೆ. ಹಾಗಾಗಿ ನಾವು ಯಾವುದೇ ಕಾರಣಕ್ಕಾಗಿ Tribunal Constitute ಮಾಡಲು ಕರ್ನಾಟಕದಲ್ಲಿ ಅವಕಾಶ ಕೊಟ್ಟಿರಲಿಲ್ಲ. ಬೇಡ ಎಂದು ಹೇಳಿ ನಾವು ಮಾತುಕತೆ ಮುಖಾಂತರವೇ ಸಂಕಷ್ಟ ಇರತಕ್ಕ ಸಂದರ್ಭದಲ್ಲಿ ಜಲಾಶಯದಲ್ಲಿ ನೀರು ಇದ್ದಾಗ ನಮ್ಮ ರೈತರು ಎಷ್ಟು ಕಷ್ಟ ತೆಗೆದುಕೊಳ್ಳಬಹುದು ಮತ್ತು ಅದೇ ರೀತಿ ತಮಿಳುನಾಡಿನ ರೈತರು ಎಷ್ಟು ಕಷ್ಟ ತೆಗೆದುಕೊಳ್ಳಬಹುದು ಎನ್ನತಕ್ಕ ರೀತಿಯಲ್ಲಿ ಮಾತುಕತೆ ಮುಖಾಂತರ ಇದನ್ನು ಪರಿಹಾರ ಮಾಡುತ್ತಿದ್ದುದು ಕೂಡ ಇದೆ. Distress period ನಲ್ಲಿ ಈ ನೀರಿನ ಸಮಸ್ಯೆ ಬರತಕ್ಕಂತಹದು. ಆದರೆ ಇದು ದುರಾದೃಷ್ಟವಶಾತ್ ಏನಾಗಿ ಹೋಯಿತು? ನಾವು ಒಂದು ಹಂತದಲ್ಲಿ ಟ್ರಿಬ್ಯುನಲ್ ಮಾಡಬೇಕು ಎಂದು ಹೇಳಿ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಕೇಂದ್ರದಲ್ಲಿ ಹೋದಾಗ ನಾವೆಲ್ಲ ಸಂಸತ್ ಸದಸ್ಯರು ಒತ್ತಡ ಹಾಕಿ ಬೇಡ ನಾವು ಮಾತುಕತೆ ಮುಖಾಂತರ ಪರಿಹಾರ ಮಾಡಿಕೊಳ್ಳೋಣ ಎಂದು ಹೇಳಿದೆವು. ನಮ್ಮಲ್ಲಿ ಅಲ್ಲ, ಬಹುಶಃ ನಮ್ಮ ಬಸವರಾಜ್ ಬೊಮ್ಮಾಯಿಯವರಿಗೆ ಗೊತ್ತಿರಬಹುದು, ನೀರಿನ ಸಮಸ್ಯೆಯನ್ನು Tribunalಗಳು, ಕೋರ್ಟ್‌ಗಳು ಕಾನೂನು ಮುಖಾಂತರ ಜಗತ್ತಿನಲ್ಲಿ ಎಲ್ಲೂ ಕೂಡ ಬಗೆಹರಿಸುವುದಕ್ಕೆ ಆಗುವುದಿಲ್ಲ. ಆಗಲೇ ಮಾನ್ಯ ಜಯಚಂದ್ರರವರು ಇನ್ನೂ ಹತ್ತಿಪ್ಪತ್ತು ವರ್ಷಗಳಾದರೂ ಅದು ಆಗುವುದಿಲ್ಲ ಎನ್ನತಕ್ಕ ರೀತಿಯಲ್ಲಿ ಹೇಳುತ್ತಿದ್ದರು. ನೀವು ಹತ್ತು ಸಾರಿ Tribunal ಮುಂದೆ ಹೋದರೂ, ಹತ್ತು ಸಾರಿ ಸುಪ್ರೀಂಕೋರ್ಟ್ ಮುಂದೆ ಹೋದರೂ, ಇದು ಬಗೆಹರಿಸಲಿಕ್ಕೆ ಬಹಳ ಕಷ್ಟ ಇರತಕ್ಕದ್ದಾಗಿದೆ. ಹಾಗಾಗಿ ನಾವು Tribunal ಅನ್ನು ರಚನೆ ಮಾಡುವುದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಆದರೆ 1989ರಲ್ಲಿ ಮಾನ್ಯ ವಿ.ಪಿ.ಸಿಂಗ್ ರವರು Prime Minister ಆಗಿದ್ದಾಗ, ತಮಿಳುನಾಡಿನ ಒಬ್ಬ ರೈತರು ನಮಗೆ Tribunal ಅನ್ನು constitute ಮಾಡಿಕೊಡಿ ಎಂದು ಸುಪ್ರೀಂಕೋರ್ಟ್‌ನಲ್ಲಿ Public Interest Litigation ಅನ್ನು ಸಲ್ಲಿಸಿದರು. ಅದು ಸುಪ್ರೀಂಕೋರ್ಟಿನ ಮುಂದೆ ಇದ್ದಾಗ, ಕೇಂದ್ರ ಸರ್ಕಾರದ ಪರವಾಗಿ Additional Solicitor General ರವರು ಬಂದು, Tribunal ರಚಿಸುವುದಕ್ಕೆ ಅವಕಾಶ ಕೊಡುವಂತಹ consent ಕೊಟ್ಟರು. ಹಿಂದೆ ನಾವು ಅದನ್ನು ಒಪ್ಪಿರಲಿಲ್ಲ. ಅದು ಆಗ ರಚನೆಯಾಯಿತು.

Tribunal ರಚನೆಯಾದ ಮೇಲೆ, ಬಂದಂತಹ interim order ಬಗ್ಗೆ ನಾವೆಲ್ಲರೂ ಕೂಡ ಪಾರ್ಲಿಮೆಂಟ್‌ನಲ್ಲಿ ಭಾರೀ ಗಲಾಟೆ ಮಾಡಿದೆವು. Even Tribunal final order ಕೂಡ ನಮಗೆ ಕಷ್ಟವಾಗಿದೆ ಎಂದೇ ನಾವು Revision Petition ಹಾಕಿದ್ದೇವೆ. Interim Order ಬಂದಾಗ ಕೂಡ, ನಮಗೆ ಎಷ್ಟು ಅನ್ಯಾಯವಾಗುತ್ತಿದೆ ಎಂದು ಪಾರ್ಲಿಮೆಂಟ್‌ನಲ್ಲಿ ಎಲ್ಲಾ ಸದಸ್ಯರೂ ಕೂಡ ಭಾರೀ ಗಲಾಟೆ ಮಾಡಿದೆವು. ಮಾನ್ಯ ಪ್ರಧಾನ ಮಂತ್ರಿಗಳು ಮಧ್ಯಪ್ರವೇಶ ಮಾಡಿ, ನಾವು ಯಾವುದೇ ರೀತಿಯಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ ಎಂದು ಆಗ ಹೇಳಿದ್ದರು. ನಾನು ಅವತ್ತು Tribunal interim order ನ ಮೇಲೆ ಮಾತನಾಡುತ್ತಾ ಯಾವ ತರಹ ಅದು un-scientific ಆಗಿದೆ ಎಂದು ಹೇಳಿದೆ. ಅದು ಅವೈಜ್ಞಾನಿಕವಾದಂತಹ ರೀತಿಯಲ್ಲಿ, arbitrary, ಏಕಪಕ್ಷೀಯವಾದ ರೀತಿಯಲ್ಲಿ, un-realistic ಆದಂತಹ ರೀತಿಯಲ್ಲಿದೆ. ಯಾವುದೇ Tribunal orders ಅನ್ನು ನಾವು ಸೂಕ್ಷ್ಮವಾಗಿ ನೋಡಿದರೆ, it is impracticable to implement. ಬಹಳ ಮುಖ್ಯವಾಗಿ ನಾವು ಇದನ್ನು ನೋಡಬೇಕಾಗುತ್ತದೆ. Tribunal order ಅನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವೇ? ಆಗುವುದಿಲ್ಲ, ಬಹಳ ಕಷ್ಟವಿದೆ. ಏಕೆಂದರೆ, ನಾನು ಅಲ್ಲಿ ಮಾತನಾಡುತ್ತಾ ಹೇಳಿದೆ. Tribunal ನವರು ಏನೇ award ಮಾಡಿದರೂ ಕೂಡ, ಅದು ನನ್ನ ರೈತನಿಗೆ ಹಿಡಿಸಬೇಕು. ಕರ್ನಾಟಕದ ರೈತರಿಗೆ ಅದರಿಂದ ಕಷ್ಟವಾಗುತ್ತದೆ. ಇದು ಅವನಿಗೆ ಜೀವನ್ಮರಣದ ಪ್ರಶ್ನೆಯಾಗುತ್ತದೆ. ಅವನಿಗೆ ಕಾನೂನಿಗಿಂತ ತನ್ನ ಹೊಟ್ಟೆಯ ಸಮಸ್ಯೆ ಮುಖ್ಯವಾಗಿರುತ್ತದೆ. ಈಗ ನೀವು Tribunal award ಅನ್ನು implement ಮಾಡಲಿಕ್ಕೆ ಹೋದರೆ, ಒಂದು ಲಕ್ಷ ಜನ ಬಂದು ಕುಳಿತುಕೊಳ್ಳುತ್ತಾರೆ, ನಿಮ್ಮನ್ನು ಬಿಡುವುದಿಲ್ಲ ಎಂದು ನಾನು ಪಾರ್ಲಿಮೆಂಟ್ ನಲ್ಲಿ ಮಾತನಾಡುತ್ತಾ ಹೇಳಿದೆ. ಹಾರಂಗಿ, ಹೇಮಾವತಿ, ಕೆ.ಆರ್.ಎಸ್. ಜಲಾಶಯಗಳಲ್ಲಿ ನೀರನ್ನು ಹಾಗೆಯೇ ಇಟ್ಟುಕೊಳ್ಳಬೇಕಾಗುತ್ತದೆ. ಅವರನ್ನು ಏನು ಮಾಡುತ್ತೀರಿ? Are you going to kill them? ಅವರನ್ನು ನೀವು ಏನು ಮಾಡುತ್ತೀರಿ? ಇದನ್ನು ಅನುಷ್ಠಾನಕ್ಕೆ ತರಲಿಕ್ಕೆ ಬಹಳ ಕಷ್ಟವಾಗುತ್ತದೆ ಮುಂತಾಗಿ ನಾವು Tribunal Interim Order ಬಗ್ಗೆಯೇ ಬಹಳಷ್ಟು ಮಾತನಾಡಿ ಅದನ್ನು ತಡೆಹಿಡಿದಿದ್ದೆವು. ಅದಾದ ಮೇಲೆ, ಏನಾಯಿತು?

ಇವತ್ತು ನಮ್ಮ ಮಾನ್ಯ ರೇವಣ್ಣನವರು ಮಾತನಾಡುತ್ತಿದ್ದಾರೆ. ಮಾನ್ಯ ರೇವಣ್ಣನವರೆ, ನಿಮ್ಮ ತಂದೆಯವರೇ, Chief Minister ಆಗಿದ್ದರು. ನಮಗೆ National Water Policy ಬೇಕು ಎನ್ನುವಂತಹ ನಿಟ್ಟಿನಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಇದೇ ಮಾನ್ಯ ದೇವೇಗೌಡರು ಸಾತನೂರು ಮತ್ತು ಹೊಳೆನರಸೀಪುರ ಎರಡೂ ಕಡೆ assembly ಚುನಾವಣೆಯಲ್ಲಿ ಸೋತಾಗ, Interim Order ಬಂದಾಗ, ಬೀದಿ ಬೀದಿಗಳಲ್ಲಿ ಪ್ರತಿಭಟಿಸಿದರು, ಹೋರಾಟ ಮಾಡಿದರು. ಅವರು ಬುದ್ಧಿವಂತರು, ಬಹಳ ದೊಡ್ಡ ಗಲಾಟೆಯನ್ನು ಮಾಡಿದರು. ಮೈಸೂರಿಗೆಲ್ಲಾ ಬಂದರು. ರಕ್ತ ಬೇಕಾದರೆ ಕೊಡುತ್ತೇನೆ, ಆದರೆ ನೀರು ಮಾತ್ರ ಕೊಡುವುದಿಲ್ಲ ಎಂದು ಭಾಷಣಗಳನ್ನು ಮಾಡಿದರು. ಬಹಳ ದೊಡ್ಡದಾಗಿ ಎಲ್ಲರನ್ನೂ ಹುರಿದುಂಬಿಸಿದರು. ಅವತ್ತು ಬಹಳಷ್ಟು provocative speeches ಆಯಿತು. ಅವತ್ತು ಅವರು ಭಾಷಣ ಮಾಡಿದಾಗ, ಜನ ನಮ್ಮ ಮೇಲೆ ಹೇಗೆ ಬಿದ್ದರು ಎಂಬುದು ನಮಗೆ ಗೊತ್ತು. ಆದರೆ ಅದೇ ಮಾನ್ಯ ದೇವೇಗೌಡರು 1994ರಲ್ಲಿ Chief Minister ಆದರು. ಆ ಸಮಯದಲ್ಲಿ 1994–95ರಲ್ಲಿ ಕೇಂದ್ರದಲ್ಲಿ ಮಾನ್ಯ ಪಿ.ವಿ. ನರಸಿಂಹರಾವ್ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಸುಪ್ರೀಂ ಕೋರ್ಟಿನವರು order ವೊಂದನ್ನು pass ಮಾಡಿದರು. Tribunal ನವರು ಏನೊಂದು order ಮಾಡಿದ್ದಾರೋ, ಅದನ್ನು ಜಾರಿಗೊಳಿಸಿ ಎಂದು ತಮಿಳುನಾಡಿನವರು ಮನವಿ ಮಾಡಿದ ಮೇಲೆ, ಕೋರ್ಟಿನವರು Prime Minister ಗೆ binding ಮಾಡಿದರು. ನೀವು ಎರಡೂ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ, ನಿಮ್ಮ delta ದಲ್ಲಿ ಬರತಕ್ಕಂಥ ಚುನಾಯಿತ ಪ್ರತಿನಿಧಿಗಳ ಜೊತೆಗೆ ಮಾತನಾಡಿ, ತಮಿಳುನಾಡಿಗೆ Tribunal ನವರು ಏನು award ಮಾಡಿದ್ದಾರೋ, ಅದನ್ನು ಬಿಡಿಸಿಕೊಡಬೇಕು, ಅದು ನಿಮ್ಮ ಜವಾಬ್ದಾರಿ ಎಂದು Prime Minister ಗೆ binding ಮಾಡಿದರು. ಆಗ Prime Minister ರವರು ಮಾನ್ಯ ದೇವೇಗೌಡರ ಹತ್ತಿರ ಮಾತನಾಡಿದರು. ಆಗ ಅವರು Chief Minister ಆಗಿದ್ದರು. Prime Minister ಮಾನ್ಯ ನರಸಿಂಹರಾವ್ ಅವರು ನಮ್ಮನ್ನೆಲ್ಲಾ ಕರೆಸಿ ಮಾತನಾಡಿದರು. ನಾನು ಮಾನ್ಯ ದೇವೇಗೌಡರ ಹತ್ತಿರ ಮಾತನಾಡಿದ್ದೇನೆ, ಹೋಗಿ ಎಂದರು. ಆಗ ನಾನು ಗಾಬರಿಯಾದೆ. ಮಾನ್ಯ ದೇವೇಗೌಡರು, ರಕ್ತ ಬೇಕಾದರೆ ಕೊಡುತ್ತೇನೆ, ನೀರು

ಕೊಡುವುದಿಲ್ಲ ಎಂದಿದ್ದಾರೆ. ಅವರ ಹತ್ತಿರ ಹೇಗೆ ಮಾತನಾಡುವುದು ಎಂದು ಗಾಬರಿಯಾದೆ. ನಂತರ ಮಾನ್ಯ ದೇವೇಗೌಡರ ಜೊತೆಗೆ ಮಾತನಾಡಿದೆವು. ಆಗ ಮಾನ್ಯ ದೇವೇಗೌಡರು, ನಮ್ಮ ಜಲಾಶಯದಲ್ಲಿ ನೀರಿದೆ, ಅಲ್ಲಿ ನೀರಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ, Prime Minister ಗೆ binding ಮಾಡಿದ್ದಾರೆ, ಮಾನ್ಯ Prime Minister ರವರು request ಮಾಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ಅವರಿಗೆ ಹೇಳಿದೆ. ಈಗ ನಾವು ಏನು ಮಾಡಬೇಕು ಎಂಬುದನ್ನು ತಾವೇ ಹೇಳಿ ಎಂದು ಅವರು ನಮ್ಮ ಹತ್ತಿರ ಎಲ್ಲಾ discuss ಮಾಡಿದರು. ಈಗೊಂದು ಕೆಲಸ ಮಾಡೋಣ, ಇದೊಂದು ಸರಿಯಾದ ಸಮಯ. ಏನು ಮಾಡಬಹುದು ಸಾರ್ ಎಂದಾಗ, ಈ ಬಗ್ಗೆ Prime Minister ಆದ ನೀವು interest ತೆಗೆದುಕೊಳ್ಳಬೇಕು ಎಂದು ಹೇಳೋಣ. ಏಕೆಂದರೆ, ಯಾವುದೇ ತರಹದ dialogue ಮಾಡಿ, policy ಮಾಡಬೇಕಾದರೆ, Prime Minister ಮಾಡಬೇಕಾಗುತ್ತದೆ. Broad-based guidelines ಇಟ್ಟುಕೊಂಡು, National Water Policy ಮಾಡಿ ಎಂದು ಕೇಳಿಕೊಳ್ಳೋಣ. ಅದಕ್ಕೆ ಅವರು ಒಪ್ಪಿದರೆ, ನಾವು ನೀರು ಬಿಡುತ್ತೇವೆ ಎಂದು ಹೇಳಿ ಎಂದೆವು. ಆಯಿತು ಹೇಳೋಣ ಎಂದರು. ಅವರು ಮಾನ್ಯ Prime Minister ರವರ ಹತ್ತಿರ ಮಾತನಾಡಿದರು. ಅದಕ್ಕೆ ಅವರು ಒಪ್ಪಿದರು. ನೀರನ್ನೂ ಕೂಡ ಆಗ ಬಿಟ್ಟು ಕೊಟ್ಟೆವು. ನೀರು ಬಿಡಲಿಲ್ಲವೆಂದಲ್ಲ. ತಮಿಳುನಾಡಿಗೆ ಆಗ ನಾವು ನೀರು ಬಿಟ್ಟೆವು. ಆದರೆ ನಂತರ ಅದೇ ಮಾನ್ಯ ದೇವೇಗೌಡರು Prime Minister ಆದರು. ಆಗ ಅವರು ಏಕೆ National Water Policy ಯನ್ನು ಮಾಡಲಿಲ್ಲ? ಅವರು ಅದರ ಬಗ್ಗೆ ಚಕಾರವನ್ನೇ ಎತ್ತಲಿಲ್ಲ. ಅವರು ಆ ಬಗ್ಗೆ dialogue ಶುರು ಮಾಡಬಹುದಾಗಿತ್ತು. ನೀರಾವರಿ ತಜ್ಞರು, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲರ ಜೊತೆಗೆ ಮಾತನಾಡಬಹುದಾಗಿತ್ತು. ನಾನು ಏಕೆ ಹೇಳಿದೆ ಎಂದರೆ, ಬಹುಶಃ ಮಾನ್ಯ ಜಯಚಂದ್ರರವರು ಹೇಳಿದಂತೆ ಕೋರ್ಟಿಗೆ revision petition ಹಾಕುತ್ತೇವೆ, ಅದನ್ನು ಬಿಡುವುದಿಲ್ಲ. ಏಕೆಂದರೆ, ನಾವು upper riparian area ದಲ್ಲಿದ್ದೇವೆ. ನಮ್ಮಿಂದಲೇ ಅವರಿಗೆ ನೀರು ಹರಿದು ಹೋಗಬೇಕು. ಹಾಗೆಂದು ನಾವು ನೀರನ್ನು ಕೊಡಲಿಕ್ಕೇ ಆಗುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಎಷ್ಟು ಕೊಡಬಹುದು ಎನ್ನುವುದೇ ಇಲ್ಲಿ

ಮುಖ್ಯವಾಗಿರುತ್ತದೆ. Distress period ನಲ್ಲಿ, ಸಂಕಷ್ಟದ ಪರಿಸ್ಥಿತಿಯಲ್ಲಿ ನಮ್ಮ ಜಲಾಶಯಗಳಲ್ಲಿ ಇರತಕ್ಕಂಥ ನೀರಿನ ಪ್ರಮಾಣವನ್ನು ನೋಡಿಕೊಂಡು, ನಾವು ಎಷ್ಟು ಕೊಡಲಿಕ್ಕೆ ಸಾಧ್ಯ? ಎನ್ನುವುದನ್ನು ಮಾಡಬಹುದೇ ಹೊರತು, ನೀರನ್ನು ಕೊಡುವುದೇ ಇಲ್ಲವೆಂದು ನೀವು out right ಆಗಿ reject ಮಾಡುವುದಕ್ಕೂ ಕೂಡ ಬರುವುದಿಲ್ಲ, ಕಾನೂನು ಅದನ್ನು ಒಪ್ಪುವುದಿಲ್ಲ. ನಾನು, ಮಾನ್ಯ ನಂಜೇಗೌಡರು ಮತ್ತು ಮಾನ್ಯ ಮಾದೇಗೌಡರೆಲ್ಲರೂ ಮಾನ್ಯ ನಾರಿಮನ್‌ರವರು ನಮ್ಮ ಹತ್ತಿರ ಮಾತನಾಡುವಾಗ ಈ ಬಗ್ಗೆ ಕೇಳಿದ್ದೆವು. ನಾವು legal ಆಗಿ ಮತ್ತು political ಆಗಿ battle ಮಾಡುತ್ತಿಲ್ಲ ಎಂದಲ್ಲ. ತಮಿಳುನಾಡಿನವರಷ್ಟು emotional ಆಗಿ ನಾವು ಮಾಡುವುದಿಲ್ಲ. It is a regional party, Dravidian Party. ಆದ್ದರಿಂದ ಅವರು ಹಾಗೆ ಮಾಡುತ್ತಾರೆ. ನಾವೆಲ್ಲಾ national party ಗೆ ಸೇರಿದವರಾಗಿದ್ದೇವೆ. ನಾವು ಯಾವುದೇ ವಿಷಯದ ಬಗ್ಗೆ ಪ್ರಸ್ತಾಪ ಮಾಡುವಂತಹ ಸಮಯದಲ್ಲಿ ಹತ್ತಾರು ಸಲ ಆಲೋಚನೆ ಮಾಡುತ್ತೇವೆ. ನಾವೂ ಕೂಡ ಇವತ್ತು ಈಗಾಗಲೇ ತಾವು ಹೇಳಿದಂತೆ revision petition ಹಾಕಿದ್ದೇವೆ. ಹಾಗೆಯೇ ಮಾನ್ಯ ನಾರಿಮನ್‌ರವರೂ ಕೂಡ ಒಂದು ಹಂತದಲ್ಲಿ ಹೇಳಿದರು. ನಾವು ಕೊಡುವುದಕ್ಕೆ ಆಗುವುದೇ ಇಲ್ಲವೆಂದು ಹೇಳುವುದಕ್ಕೆ ಹೋಗಬೇಡಿ, bargain ಮಾಡಿ, ಎಷ್ಟು ಕೊಡುವುದಕ್ಕೆ ಸಾಧ್ಯ? ಹೇಗೆ ಕೊಡುವುದಕ್ಕೆ ಸಾಧ್ಯ? ಎಂಬುದನ್ನು ನೋಡಿ ಎಂದರು. ನೀವು ಇವತ್ತು ಮೇಕೆದಾಟಿನದ್ದು ಹೇಳುತ್ತಿದ್ದಿರಿ. ನೀರಿನ ವಿವಾದ ಬಗೆಹರಿಯದೆ, ಅದು ಎಲ್ಲಿ ಆಗುತ್ತದೆ? ನೀವು ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ನಿರ್ಣಯ ತೆಗೆದುಕೊಂಡರೂ, ಕಾವೇರಿ ಡೆಲ್ಟಾದಲ್ಲಿ ಯಾವೊಂದು ಕೆರೆಯ ಹೂಳೆತ್ತುವುದೂ ಕೂಡ ಸಾಧ್ಯವಾಗಲಿಲ್ಲ. ಮೇಕೆದಾಟಿನ ಬಗ್ಗೆ ನೀವು ಹೇಳಿದ್ದು correct. ನೀವು ಮೊದಲು ವಿವಾದ ಬಗೆಹರಿಸಿಕೊಳ್ಳಿ. ನೀವು ಮಾತುಕತೆ ಮುಖಾಂತರ ಎಷ್ಟು ನೀರನ್ನು ಅವರಿಗೆ ಕೊಡಬೇಕು? Periodically ಏನೇನು ಮಾಡಬೇಕು ಎನ್ನುವುದನ್ನು ಪರಿಹರಿಸಿಕೊಳ್ಳಿ. ಈ ಸಮಸ್ಯೆ ಬಗೆಹರಿದರೆ, ನೀವು ಹೇಳಿದಂತೆ ಮೇಕೆದಾಟಿನ ಯೋಜನೆ ಬರುತ್ತದೆ. ಅಲ್ಲಿ ನಾವು ವಿದ್ಯುತ್ ಉತ್ಪಾದನೆ ಯನ್ನೂ ಸಹಾ ಮಾಡಬಹುದು. ಕುಡಿಯುವ ನೀರನ್ನು ಮೈಸೂರಿನಿಂದ ಬೆಂಗಳೂರಿಗೆ ಬದಲು ಮೇಕೆದಾಟಿನಿಂದ ಬೆಂಗಳೂರಿಗೆ ಬೇಕಾದಷ್ಟು

ಕೊಡಬಹುದು. ಇದನ್ನು ಮಾಡಬಹುದಾಗಿತ್ತು. ವಿವಾದ ಬಗೆಹರಿಯದೆ ಇದು ಸಾಧ್ಯವಿಲ್ಲ. ಆಗಲೇ ನಾನು ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳೇ, ತಾವು ಕೇಂದ್ರ ಸರ್ಕಾರಕ್ಕೆ ಹೋದಾಗ ಇದರ ಬಗ್ಗೆ ಮಾತನಾಡಿ. ಒಂದು National Water Policy ಆಗಲಿ. ನಮ್ಮದೊಂದೇ ಅಲ್ಲ, even ನಮ್ಮ ಕೃಷ್ಣಾ ನದಿ ಇರಬಹುದು, ನರ್ಮದಾ ನದಿ ಇರಬಹುದು, ಎಲ್ಲದರ ಸಮಸ್ಯೆಗಳೂ ಸಹಾ ಕೇಂದ್ರದ ಮುಂದಿವೆ. ಅದಕ್ಕೋಸ್ಕರ, with broad-based guidelines, ಒಂದು National Water Policy evolve ಮಾಡಬೇಕು, ರಾಷ್ಟ್ರೀಯ ಜಲ ನೀತಿ ಬರಬೇಕು. ಸರ್ವ ಪಕ್ಷಗಳ ನಿಯೋಗ ತೆಗೆದು ಕೊಂಡು ಹೋಗುವಂತಹ ಸಮಯದಲ್ಲಿ ತಾವು ರಾಷ್ಟ್ರೀಯ ಜಲ ನೀತಿ ರೂಪಿಸುವುದರಿಂದ ಮಾತ್ರವೇ ನೀರಿನ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯ ಎನ್ನುವುದನ್ನು ಹೇಳಬೇಕು. ಮಾನ್ಯ ದೇವೇಗೌಡರೂ ಕೂಡ ಈಗ ಇದ್ದಾರೆ. ಅವರನ್ನೂ ಕೂಡ ಕರೆಸಿಕೊಳ್ಳಿ. ನಾವೆಲ್ಲರೂ ಕೇಂದ್ರ ಸರ್ಕಾರಕ್ಕೆ ಸರ್ವ ಪಕ್ಷಗಳ ನಿಯೋಗ ಹೋದಂತಹ ಸಂದರ್ಭದಲ್ಲಿ ಮಾತನಾಡೋಣ. ಇದು ತಮ್ಮ ಮನಸ್ಸಿನಲ್ಲಿ ಇರಲಿ ಎಂದು ನಾನು ಹೇಳುತ್ತೇನೆ. ಈ ರಾಷ್ಟ್ರೀಯ ಜಲನೀತಿಯನ್ನು ಕೇಂದ್ರ ಸರ್ಕಾರದವರು ಮಾಡಬೇಕು ಎನ್ನುವುದನ್ನು ಹೇಳಬೇಕು. ಪದೇ ಪದೇ ಈ ರೀತಿ ತಮಿಳುನಾಡಿನವರು ಆ ವಿಷಯವನ್ನು ಮನವಿ ಮಾಡಿ, ಒಂದು emotional issue ಆಗಿ ಮಾಡುತ್ತಾರೆ. ನಾನು ಪಾರ್ಲಿಮೆಂಟಿನಲ್ಲಿ ಬಹಳ ಚೆನ್ನಾಗಿ ಹೇಳಿದ್ದೆ. ಅದು ಕೊನೆಯಲ್ಲಿ ಏನಾಯಿತು ಎಂಬುದನ್ನು ತಾವು ನೋಡಿದ್ದೀರಿ. This will become an ethnic problem. ಇದೊಂದು ಜನಾಂಗೀಯ ಸಮಸ್ಯೆಯಾಗುತ್ತದೆ. ಕಾವೇರಿ ನೀರಿನ ವಿವಾದದಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ರೈತರು ನೀರು ಹಂಚಿಕೊಳ್ಳುವುದನ್ನು ಬಿಟ್ಟು, ಯಾವ ರೀತಿ ಗಲಾಟೆ ಮಾಡಿಕೊಂಡರು ಎಂಬುದು ನಿಮಗೆ ಗೊತ್ತು. ಇವರು ತಮಿಳು, ಇವರು ಕನ್ನಡಿಗರು ಎಂದು ಗಲಾಟೆಯಾಗಿ ಎಂತಹ ದುರಂತವಾಯಿತು? ಇದು ಜನಾಂಗೀಯ ಸಮಸ್ಯೆ ಆಗಿ ಬಿಟ್ಟಿತು. ಕೆಲವೊಂದು ಶಕ್ತಿಗಳು, ಆ ಕಡೆ ಮತ್ತು ಈ ಕಡೆ ಇರತಕ್ಕವರು, ಇದಕ್ಕಾಗಿ ಕಾಯುತ್ತಿರುತ್ತಾರೆ. ಹಾಗಾಗಿ ಉದ್ವೇಗಕ್ಕೆ ಒಳಗಾಗಿ ನಾವು ಹೇಳಿಕೆ ಗಳನ್ನು ಕೊಡಬಾರದು. ನಾನು ಎಲ್ಲರಿಗೂ ಒಂದು ಮಾತು ಹೇಳುತ್ತಿದ್ದೆ, ಬಹಳ ಬೇಗ ಇದು ಪ್ರಚೋದನಾಕಾರಿ ಆಗುತ್ತದೆ, emotional issue ಆಗುತ್ತದೆ. ನೀರಿನದು, ಭಾಷೆಯದು ಮತ್ತು ಗಡಿ ಸಮಸ್ಯೆ ಇದೆಲ್ಲಾ ಬಂದಾಗ,

ನಾವು ಬಹಳ ಎಚ್ಚರಿಕೆಯಿಂದ ಇರಬೇಕು. ನಮ್ಮ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ನಮ್ಮ ವಿರೋಧ ಪಕ್ಷದವರಾಗಲಿ, ಈ ತರಹದ ವಿಷಯದಲ್ಲಿ, ನಾವು ಇದನ್ನು tackle ಮಾಡತಕ್ಕ ಸಂದರ್ಭದಲ್ಲಿ ಸ್ವಲ್ಪ ಎಚ್ಚರಿಕೆಯಿಂದ ಇರಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ತಾವು ಸರ್ವ ಪಕ್ಷಗಳ ನಿಯೋಗವನ್ನು ಕೊಂಡೊಯ್ಯುವ ಸಂದರ್ಭದಲ್ಲಿ ರಾಷ್ಟ್ರೀಯ ಜಲ ನೀತಿ ರೂಪಿಸಬೇಕೆಂದು ಒತ್ತಿ ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಪ್ರಸಾದ್‌ರವರು ಒಂದೆರಡು ವಿಷಯಗಳನ್ನು ಹೇಳಿದ್ದಾರೆ. ಮಾನ್ಯ ದೇವೇಗೌಡರು ಈ ಸದನದಲ್ಲಿ ಇಲ್ಲ. ಸದನದಲ್ಲಿ ಇಲ್ಲದಿರುವುದರಿಂದ ಅವರಿಗೆ ಇಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಸದನಕ್ಕೆ ತಪ್ಪು ಮಾಹಿತಿ ಹೋಗಬಾರದು. ಮಾನ್ಯ ದೇವೇಗೌಡರು 1983 ರಿಂದ 1989 ರವರೆಗೆ ಆರು ವರ್ಷಗಳ ಕಾಲ ನೀರಾವರಿ ಮಂತ್ರಿಗಳಾಗಿ ಏನು ಮಾಡಿದ್ದಾರೆ ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದರೆ, ಆ ಬಗ್ಗೆ ಮಾತನಾಡುವುದಕ್ಕೆ ನಾವು ರೆಡಿಯಿದ್ದೇವೆ. ಮಾನ್ಯ ದೇವೇಗೌಡರು 1994ರಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಕಾವೇರಿ ಟ್ರಿಬ್ಯೂನಲ್ ಅನ್ನು ನೇಮಕಾತಿ ಮಾಡಿದಾಗ, ಅದಕ್ಕೆ Protest ಮಾಡಬೇಕಾದಂತಹ ಸರ್ಕಾರ ಯಾವುದು ಸ್ವಾಮಿ? ನಾವೇನು ಬೇಡ ಎಂದು ಹಿಡಿದುಕೊಂಡಿದ್ದೇವೆಯೇ? 1990ನೇ ಇಸವಿಯಲ್ಲಿ ಯಾರು ಅಧಿಕಾರದಲ್ಲಿದ್ದರು? ಎನ್ನುವುದನ್ನು ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೇ ಹೇಳಲಿ. ಈ ಸದನದಲ್ಲಿ ಇನ್ನೊಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ಕಣ್ಣ ಮುಂದೆ ಮಾನ್ಯ ರಾಜೀವ್ ಗಾಂಧಿಯವರಿಲ್ಲ. ಈ ರಾಜ್ಯಕ್ಕೆ ಅನ್ಯಾಯವಾದಾಗ, ಮಾನ್ಯ ರಾಜೀವ್ ಗಾಂಧಿಯವರು ಯಾವ ರೀತಿಯಾಗಿ ಸರಿಪಡಿಸಿದರು ಎನ್ನುವುದರ ಬಗ್ಗೆ ನಾವು ಹೇಳಬೇಕಾಗುತ್ತದೆ. ಅದನ್ನು time ಬಂದಾಗ ನಾವು ಹೇಳುತ್ತೇವೆ. ಮಾನ್ಯ ಶ್ರೀನಿವಾಸ ಪ್ರಸಾದ್ ರವರೆ, 1990ನೇ ಇಸವಿಯಲ್ಲಿ ಟ್ರಿಬ್ಯೂನಲ್ ರಚನೆಯಾದಾಗ ಈ ರಾಜ್ಯದಲ್ಲಿ ಇದ್ದಂತಹ ಸರ್ಕಾರ ಯಾರದು? ಮಾನ್ಯ ದೇವೇಗೌಡರು 1994ರಲ್ಲಿ ಬಂದರು. 1994ರಲ್ಲಿ ಅವರು ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ, ಟ್ರಿಬ್ಯೂನಲ್ ರಚನೆಯಾದಾಗ ಯಾರ ಸರ್ಕಾರ ಅಧಿಕಾರದಲ್ಲಿತ್ತು?

ಅವತ್ತೇನಾದರೂ ನೀವು oppose ಮಾಡಿಬಿಟ್ಟು, ಇಲ್ಲ, ನ್ಯಾಯಾಧಿಕರಣದಿಂದ ಇದು ಆಗುವುದಿಲ್ಲ, ದಯಮಾಡಿ, ಒಬ್ಬರಿಗೊಬ್ಬರು, ಈ ರಾಜ್ಯದವರು ಮತ್ತು ಆ ರಾಜ್ಯದವರು, ಇಬ್ಬರೂ ಪರಸ್ಪರ ಮಾತುಕತೆ ಮಾಡಬೇಕು ಎಂದು ಅಂದು ನೀವು ಹೇಳಬೇಕಾಗಿತ್ತು. ಅಂದು ನೀವು ಆ ರೀತಿ ಹೇಳಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ಆ ರೀತಿ ಹೇಳಬೇಡಿ ಎಂದು ನಾವೇನಾದರೂ ನಿಮ್ಮನ್ನು ಹಿಡಿದುಕೊಂಡಿದ್ದೇವೇ? 1990ನೇ ಇಸವಿನಲ್ಲಿ ನಾವು ಇರಲಿಲ್ಲ, ದೇವೇಗೌಡರೇನು ಈ ರಾಜ್ಯದ ಮುಖ್ಯಮಂತ್ರಿಯಾಗಿರಲಿಲ್ಲ. ಅದರ ಜೊತೆಗೆ 1964ರಲ್ಲಿ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನಿಮ್ಮ ಕೃಷ್ಣಾ ಬೇಸಿನ್‌ಗೆ ಫೌಂಡೇಷನ್ ಹಾಕಿದರು, ದೇವೇಗೌಡರು ಬರುವವರೆಗೆ ಎಷ್ಟು ಹಣ ಖರ್ಚು ಮಾಡಿದರೆಂದು ಬೇಕಾದರೆ ನೀರಾವರಿ ಮಂತ್ರಿಗಳು ಹೇಳಲಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ಶಿವಕುಮಾರ್ ಅವರೆ, ನಾನು ನಿಮ್ಮ ಹತ್ತಿರ ಹೇಳಿಸಿಕೊಳ್ಳಬೇಕಾಗಿಲ್ಲ, ಡಾಕ್ಟರು ಮಧ್ಯಪ್ರದೇಶ ಮಾಡಿದ್ದರಿಂದ ನಾನು ಹೇಳಿದ್ದು...

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಯಾರಿಂದಲೂ ನಾವು ಕಲಿಯಬೇಕಾಗಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಹೇಳಿದ್ದಕ್ಕೆ ನಾವು ಹೇಳುತ್ತಿರುವುದು, ನಾವು ಕಲಿಯಬೇಕಾಗಿಲ್ಲ. ಹಿರಿಯ ಸದಸ್ಯರಾದ ಶ್ರೀನಿವಾಸ ಪ್ರಸಾದ್ ಅವರು ಮಾತನಾಡುವಾಗ ನಾವೆಲ್ಲಾ ಸುಮ್ಮನಿದ್ದೇವು, ದೇವೇಗೌಡರ ಹೆಸರು ಹಿಡಿದು ಮಾತನಾಡಿದರು, ದೇವೇಗೌಡರು ಈ ಸದನದಲ್ಲಿ ಇಲ್ಲ. ಈ ಸದನದಲ್ಲಿ ಇಲ್ಲದಿರುವ ವ್ಯಕ್ತಿ ಇಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ನಾನು ಹೇಳುತ್ತಿರುವುದು. 1964–1983ರವರೆಗೆ ಎಷ್ಟು ಕರ್ಚು ಮಾಡಿದರೆ ನ್ನುವುದು ನಮಗೆ ಗೊತ್ತಿದೆ, 1983–1989ರವರೆಗೆ ಎಷ್ಟು ಖರ್ಚಾಗಿದೆ ಎನ್ನುವುದು ನಮಗೆ ಗೊತ್ತಿದೆ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ನ್ಯಾಷನಲ್ ವಾಟರ್ ಪಾಲಿಸಿ ತರಲಿಲ್ಲವೆಂದು ಶ್ರೀನಿವಾಸ ಪ್ರಸಾದ್ ಅವರು ಹೇಳುತ್ತಾರೆ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಕ್ಕೇ ಈ ರಾಜ್ಯಕ್ಕೆ 5,000 ಕೋಟಿ ಹಣ ಬಂದಿದ್ದು, ಆ ಕೆಲಸವನ್ನು 50 ವರ್ಷಗಳಲ್ಲಿ ಇವರು ಮಾಡಬೇಡಿ ಎಂದು ನಾವು ಕಾಂಗ್ರೆಸ್‌ನವರನ್ನು ಹಿಡಿದುಕೊಂಡಿದ್ದವೆ? ಈಗ ಮೇಕೆದಾಟಿನ ಬಗ್ಗೆ ಹೇಳಬೇಕಾದರೆ ನಾನೇ ಇಂಧನ ಮಂತ್ರಿಯಾಗಿದ್ದಾಗ ಕಡತ ಕಳುಹಿಸಿಕೊಟ್ಟಿದ್ದೇನೆ. ಕೇಂದ್ರ ಸರ್ಕಾರದಲ್ಲಿ ಬಿದ್ದಿದೆ, ಇಲ್ಲವೋ ತೆಗೆಸಿ

ನೋಡಿ. ನಾನು ಇಂಧನ ಮಂತ್ರಿಯಾಗಿದ್ದಾಗ ಎರಡು ರಾಜ್ಯಗಳು ಮೇಕೆದಾಟಿನ ನೀರನ್ನು ಉಪಯೋಗಿಸೋಣ, ಕರೆಂಟ್ ಅನ್ನು ಉತ್ಪಾದನೆ ಮಾಡೋಣವೆಂದು ಕಡತವನ್ನು ಕೇಂದ್ರಕ್ಕೆ ಕಳುಹಿಸಿದ್ದೇವೆಯೋ ಇಲ್ಲವೋ ಎನ್ನುವುದನ್ನು ದಯಮಾಡಿ ನೋಡಿ. ಕೇಂದ್ರದಲ್ಲಿ ಕಡತವಿದೆ ತೆಗೆದು ನೋಡಿ.

ಅಧ್ಯಕ್ಷರು : ವಿಷಯಾಂತರ ಬೇಡ.

ಶ್ರೀ ಹೆಚ್.ಡಿ. ರೇವಣ್ಣ : ದೇವೇಗೌಡರು ನೀರಾವರಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ, ಪ್ರಧಾನಮಂತ್ರಿಯಾಗಿ ಈ ರಾಜ್ಯಕ್ಕೆ ಏನು ಕೊಡುಗೆ ಕೊಡಬೇಕೋ ಅದನ್ನು ಕೊಟ್ಟಿದ್ದಾರೆ. ದೇವೇಗೌಡರ ಬಗ್ಗೆ ಮಾತನಾಡುವ ನೈತಿಕತೆ ಕಾಂಗ್ರೆಸ್ ಪಕ್ಷಕ್ಕೂ ಇಲ್ಲ, ಬಿಜೆಪಿ ಪಕ್ಷಕ್ಕೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಬಹಳ ವಿಚಾರವನ್ನು ಈಗಾಗಲೇ ನಮ್ಮ ಮಾಹಿತಿಗೆ ಕೊಟ್ಟಿದ್ದಾರೆ. ಯಾರೇ ಆಗಲಿ, ಆ ಚೇರ್‌ನಲ್ಲಿ ಕುಳಿತಿರುವವರು ವಿರೋಧ ಪಕ್ಷದವರಿರಬಹುದು, ಆಡಳಿತ ಪಕ್ಷದವರು ಇರಬಹುದು, ಎಲ್ಲಾ ಸಂದರ್ಭದಲ್ಲೂ ಕೂಡ ಕಾವೇರಿ ವಿಚಾರ ಬಂದಾಗ, ರಾಜ್ಯದ ನೆಲ, ಜಲ ವಿಚಾರ ಬಂದಾಗ ಪಕ್ಷಬೇದ ಮರೆತು ಜೊತೆಗೆ ಹೊರಗಡೆ ಇರುವ ಸಾಮಾನ್ಯ ಜನ, ರೈತರೂ ಕೂಡ ಕಾವೇರಿ ಬೇಸಿನ್ ಇರಲಿ ಇಲ್ಲದಿರಲಿ, ಎಲ್ಲರು ಒಟ್ಟಿಗೆ ಈ ವಿಚಾರದಲ್ಲಿ, ಸರ್ಕಾರಗಳ ಪರವಾಗಿ ನಿಂತಿದ್ದಾರೆ. ನಾವೂ ಕೂಡ ಇಲ್ಲಿ ಕುಳಿತುಕೊಂಡು ಅನೇಕ ರೆಸಲೂಷನ್ ಗಳನ್ನು ಮಾಡಿದ್ದೇವೆ. ಈ ಕಾವೇರಿ ಇಶ್ಯೂನಲ್ಲಿ ಬೇಕಾದಷ್ಟು ಜನರು ಅಧಿಕಾರವನ್ನು ಕಳೆದುಕೊಂಡಿದ್ದಾರೆ, ಆಸ್ತಿಗಳನ್ನು ಕಳೆದುಕೊಂಡಿದ್ದಾರೆ. ಬೇಕಾದಷ್ಟು ತೊಂದರೆಗಳನ್ನು ನಾವು ನೋಡಿದ್ದೇವೆ. ಇವತ್ತು ಯಾರ ಮಧ್ಯಕ್ಕೂ ನಾವು ಪ್ರವೇಶ ಮಾಡುವುದಿಲ್ಲ, ಈ ರಾಜ್ಯದ ಹಿತವನ್ನು ಕಾಪಾಡುತ್ತಾರೆಂದು ನಮಗೆ ಭರವಸೆ ಇದೆ. ಆದರೆ ಒಂದನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ರಾಜಕಾರಣ ದಲ್ಲಿ ಯಾವ ಸಂದರ್ಭದಲ್ಲಿ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಇದೇ ಸದನ ನಡೆಯುವಂಥ ಸಂದರ್ಭದಲ್ಲಿ ಹಿಂದಿನ ಒಂದು ಸರ್ಕಾರದಲ್ಲಿ ಜಯಲಲಿತಾ ಮತ್ತು ತಮಿಳುನಾಡು ಸರ್ಕಾರಕ್ಕೆ ಯಾವುದೋ ಒಂದು understanding ಗೆ ಬರಬೇಕೆಂದು ಕೇಂದ್ರದಿಂದ ಒತ್ತಡ ಬಂತೆಂದು, ರಾತ್ರೋ ರಾತ್ರಿ ನೀರನ್ನು ಬಿಟ್ಟಂಥ ಘಟನೆ ಈ ರಾಜ್ಯದಲ್ಲಿ ನಡೆದಿದೆ. ಇಲ್ಲಿರುವ ನಾಯಕರು ಏನು ಹೆಸರುಗಳನ್ನು ಪ್ರಸ್ತಾಪ ಮಾಡಿದರಲ್ಲ, ಅವರೇ

ಪೂರಕವಾಗಿ ನಿಂತುಕೊಂಡು ರಾತ್ರೋ ರಾತ್ರಿ ನೀರು ಬಿಡಿಸಿರುವುದು ನಡೆದಿದೆ. ಅಂಥ ಸಂದರ್ಭ, ಅಂಥ ರಾಜ್ಯಕ್ಕೆ back stabbing ಏನು ನಡೆದಿತ್ತಲ್ಲಾ, ಆ ಕೆಲಸ ತಮ್ಮ ಕಾಲದಲ್ಲಾಗಬಾರದು ಎನ್ನುವ ಒತ್ತಾಯವನ್ನು ನಾನು ತಮ್ಮಲ್ಲಿ ಮಾಡುತ್ತೇನೆ. ಜೊತೆಗೆ ದೆಹಲಿಯಿಂದ Three-man committee ನೋ, ಯಾವುದೋ ಒಂದು Tribunal Committee ನೋ ಬಂದಿತ್ತು, ಅವರೊಡನೆ ಬೇಕೆಂದು ಜಗಳ ಮಾಡಿಕೊಂಡು ಅಸಭ್ಯವಾಗಿ ನಡೆದುಕೊಂಡು, ಅವರಿಗೆ ಸಹಕಾರ ಕೊಡದೆ, ಅವರ ಮೇಲೆ ಅನುಮಾನ ಪಟ್ಟುಕೊಂಡು, ನಮ್ಮಲ್ಲಿ ಬೇಕಾದಷ್ಟು ಮಾರ್ಗದರ್ಶನಗಳನ್ನು ನಡೆಸಿ, ಅವರಿಗೆ ಬೇಜಾರಾಗಿ, ಏಕಪ್ಪ, ಈ ರಾಜ್ಯಕ್ಕೆ ನಾವು ಸಹಾಯ ಮಾಡಬೇಕು ಎನ್ನುವಂಥ ಒಂದು ಪರಿಸ್ಥಿತಿ ಆ ಅಧಿಕಾರಿಗಳಿಗೆ ಬಂದಿತ್ತು. ಅವರು ಅನೇಕ ನಮ್ಮ ನಾಯಕರುಗಳ ಹತ್ತಿರ ಅಡ್ವೋಕೇಟ್ ಜನರಲ್ ಹತ್ತಿರ, ತಜ್ಞರ ಹತ್ತಿರವೆಲ್ಲ ಈ ವಿಚಾರವನ್ನು ತಿಳಿಸಿದ್ದು ಅದೆಲ್ಲಾ ಕಡತಗಳಲ್ಲಿ ದಾಖಲೆ ಇದೆ. ದಯವಿಟ್ಟು ಹಿಂದಿನ, ಮುಖ್ಯಮಂತ್ರಿಗಳು ಏನು ಮಾಡಿದರೋ, ಆ ರೀತಿ ನಮ್ಮ ರಾಜ್ಯದ ಒಳಗಡೆ ಸೇರಿಕೊಂಡು ರಾಜಕೀಯ ಲಾಭಕ್ಕೋಸ್ಕರ ತಾವು ಮಾಡಬಾರದೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಇದು ಚರಿತ್ರೆಯಲ್ಲಿ ನಡೆದದ್ದು, ನಾನು ಯಾರ ಬಗ್ಗೆಯೂ ಹೇಳುತ್ತಿಲ್ಲ, ನಡೆದಿರುವ ಚರಿತ್ರೆಯನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯದ ಹಿತವನ್ನು ರಾಜಕಾರಣಕ್ಕೋಸ್ಕರ ಮಾಡಿಕೊಂಡಂಥ ಚರಿತ್ರೆ ಈ ರಾಜ್ಯದಲ್ಲಿದೆ, ನಾವು ಕಾವೇರಿ ಬೇಸಿನ್‌ನವರು. ನಮಗೆ ಹೊಟ್ಟೆ ಉರಿಯುತ್ತದೆ ಸ್ವಾಮಿ.

ಶ್ರೀ ಹೆಚ್.ಡಿ. ರೇವಣ್ಣ : ಈ ರಾಜ್ಯದ ಹಿತವನ್ನು ಮಾರಿದ್ದರೆ, ದಯಮಾಡಿ ಹೇಳುತ್ತೇನೆ...

(ಗೊಂದಲ)

ಅಧ್ಯಕ್ಷರು : ಯಾರ ಹೆಸರನ್ನೂ ಹೇಳಲಿಲ್ಲವಲ್ಲ, ಏಕೆ ಸುಮ್ಮನೆ?

ಶ್ರೀ ವಿ. ಮುನಿಯಪ್ಪ : ಕುಂಬಳಕಾಯಿ ಕಳ್ಳ ಎಂದರೆ, ಹೆಗಲು ಮುಟ್ಟಿ ನೋಡಿಕೊಂಡಂತಿದೆ...

(ಗೊಂದಲ)

ಅಧ್ಯಕ್ಷರು : ನಾವು ಗಂಭೀರವಾದ ವಿಚಾರವನ್ನು ಚರ್ಚೆ ಮಾಡುತ್ತಿದ್ದೇವೆ, ನಮ್ಮಲ್ಲೆ ಒಗ್ಗಟ್ಟಿಲ್ಲವೆನ್ನುವುದನ್ನು ತೋರಿಸುತ್ತಿದ್ದೇವಲ್ಲಾ?

ಶ್ರೀ ಹೆಚ್.ಡಿ. ರೇವಣ್ಣ : ಅಧ್ಯಕ್ಷರೆ, ಒಂದೇ ಒಂದು ಮನವಿ ಮಾಡುತ್ತೇನೆ, ಇವತ್ತು ಕೇಂದ್ರದಲ್ಲಿ ಕಾಂಗ್ರೆಸ್ಸಿನ ಯುಪಿಎ ಸರ್ಕಾರವಿದೆ, ಇವತ್ತು ಈ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಲು ಕೇಂದ್ರ ಸರ್ಕಾರ, ಸುಪ್ರೀಂ ಕೋರ್ಟಿನಲ್ಲಿ ವಕಾಲತ್ ಹಾಕುವುದಕ್ಕೆ ಹೇಳಲಿ...

(ಗೊಂದಲ)

ಅಧ್ಯಕ್ಷರು : ಇಲ್ಲಿ ವಿಷಯಾಂತರ ಬೇಡ, ಒಗ್ಗಟ್ಟು ಪ್ರದರ್ಶಿಸಬೇಕು ಎಂದರೆ, ನಾವೇ ಜಗಳವನ್ನು ಹೊರಗೆ ತೋರಿಸುತ್ತಿದ್ದೇವಲ್ಲಾ? ದಯವಿಟ್ಟು ಅಲ್ಲಲ್ಲಿ ಮಾತನಾಡಿಬೇಡಿ. ಡಾ: ಹೆಚ್.ಸಿ. ಮಹಾದೇವಪ್ಪನವರು ತಾವು ಮಾತನಾಡಿ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಈ ಮನೆಯಲ್ಲಿ ಒಂದು ಪ್ರಮುಖವಾದ ವಿಷಯವನ್ನು ಮಾನ್ಯ ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಕೂಡ ಈ ಬಗ್ಗೆ ಗಂಭೀರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಆಲೋಚನೆ ಮಾಡಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಕಳೆದ 50 ವರ್ಷಗಳಿಂದ ಕರ್ನಾಟಕ ರಾಜ್ಯದಲ್ಲಿ ಕಾಲಕಾಲಕ್ಕೆ ಯಾವ್ಯಾವುದೇ ಪಕ್ಷದ ಸರ್ಕಾರವೇ ಇದ್ದರೂ, ಆಪತ್ಕಾಲಿಕ ಪರಿಸ್ಥಿತಿಗಳು ಬಂದಾಗ, ಕಾವೇರಿ ನೀರಿನ ಬಳಕೆ ಬಗ್ಗೆ ಒತ್ತಡಗಳು, ರಾಜಕೀಯ ತಂತ್ರಗಳು ಬಳಕೆಯಾಗಿ ಕಾಲಕಾಲಕ್ಕೆ ಅಂದಿನ ಸಂದರ್ಭಗಳಲ್ಲಿ ಕೆಲವರು ನೀರನ್ನು ಮತ್ತು ವ್ಯವಸಾಯವನ್ನು ತಮ್ಮ ರಾಜಕೀಯ ದಾಳವಾಗಿ ಬಳಸುತ್ತಾ 50 ವರ್ಷಗಳು ಕಳೆದು ಹೋಗಿದೆ. Water is a national asset. Agriculture is a national occupation. ಒಂದು ರಾಷ್ಟ್ರೀಯ ಸ್ವತ್ತನ್ನು, ರಾಷ್ಟ್ರೀಯ ಕಸುಬನ್ನು ನಾವು ಬಳಸಿಕೊಳ್ಳುವಾಗ ಒಂದು ಗಣತಂತ್ರದ ವ್ಯವಸ್ಥೆಯಲ್ಲಿ ನಾವು ಬದುಕುತ್ತಿದ್ದೇವೆ, ಈ ಸಂದರ್ಭದಲ್ಲಿ, ಏನು 50 ವರ್ಷಗಳ ತಕರಾರು ಇತ್ತು, ಬ್ರಿಟಿಷರ ಕಾಲದಲ್ಲಾದಂಥ ಅನ್ಯಾಯ, ಅಂದಿನ Madras Province ನಲ್ಲಾದ ಅನ್ಯಾಯ ಇಂದೂ ಕೂಡ ಮುಂದುವರೆದು, ಒಂದು ಟ್ರಿಬ್ಯುನಲ್‌ನಲ್ಲಿ ಅವಾರ್ಡ್ ಪಾಸ್ ಆದ ಮೇಲೆ ಕಾವೇರಿಗೆ ಸಂಬಂಧಿಸಿದ ದಕ್ಷಿಣದ 4 ರಾಜ್ಯಗಳು ತಮ್ಮ ಪಾಲಿನ ನೀರನ್ನು ಹೇಗೆ ಬಳಕೆ ಮಾಡಿಕೊಳ್ಳಬೇಕೆನ್ನು ವುದನ್ನು ನಿರ್ದಿಷ್ಟ ಪ್ರಮಾಣವನ್ನು ಗುರುತು ಮಾಡಿದ್ದಾರೆ. ಈ ಗುರುತಾಗಿರುವ ನೀರನ್ನು ಬಳಕೆ ಮಾಡಿ ನಮ್ಮ ರಾಜ್ಯದ ವ್ಯವಸಾಯವನ್ನು ಮತ್ತು ನೀರಿನ ಬಳಕೆಯನ್ನು ಬಳಸುತ್ತಾ ನಮ್ಮ ನೀರಿನ

ಸಾಮರ್ಥ್ಯವನ್ನು ಹೆಚ್ಚು ಮಾಡುವುದರ ಜೊತೆಗೆ ಉತ್ಪಾದನೆಯನ್ನು ಹೆಚ್ಚು ಮಾಡಲೇ ಬೇಕಾಗುತ್ತದೆ. 120 ಕೋಟಿ ಜನರಿಗೆ ಈಗ ಉತ್ಪಾದನೆಯಾಗುತ್ತಿರುವ ಆಹಾರ ಪದಾರ್ಥಗಳ ಎರಡು ಪಟ್ಟು ಜಾಸ್ತಿಯಾಗದೇ ಹೋದರೆ ನಮ್ಮ ಜನರಿಗೆ ಆಹಾರದ ಸ್ವಾವಲಂಬನೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಕರ್ನಾಟಕ ರಾಜ್ಯ, ರಾಜಾಸ್ಥಾನವನ್ನು ಬಿಟ್ಟರೆ ಎರಡನೇ ಮರುಭೂಮಿ ಪ್ರದೇಶವಾಗಿರುವುದರ ಜೊತೆಗೆ ಕಳೆದ ಎರಡು ವರ್ಷಗಳಿಂದ ತೀವ್ರವಾದ ಅಭಾವದ ಪರಿಸ್ಥಿತಿಯನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ, ನೀರು ಮತ್ತು ವ್ಯವಸಾಯದಲ್ಲಿ ರಾಜಕೀಯವನ್ನು ಬೆರಸದೆ ಒಗ್ಗಟ್ಟಾಗಿ, ಇವತ್ತೇನು ಟ್ರಿಬ್ಯುನಲ್ ಅವಾರ್ಡ್ ಬಂದಿದೆ, ಈಗಾಗಲೇ 192 ಟಿಎಂಸಿ ನೀರನ್ನು ತಮಿಳುನಾಡಿಗೆ ಒದಗಿಸಿ ಆಗಿದೆ, ಈಗ ನಮ್ಮ 4 ಡ್ಯಾಂಗಳಲ್ಲಿ ನೀರಿಲ್ಲ, ಕುಡಿಯುವುದಕ್ಕೆ ನೀರಿಲ್ಲ, ಅರೆ ಕುಷ್ಕಿ ಬೆಳೆಯನ್ನು ಬೆಳೆದು ಸುಟ್ಟು ಹೋಗುತ್ತಿದೆ, ಇಂಥ ಒಂದು ಆಪತ್ಕಾಲಿಕ ಪರಿಸ್ಥಿತಿ ನಮ್ಮ ರಾಜ್ಯಕ್ಕಿರುವುದರಿಂದ ರಾಜ್ಯ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಈ ಸದನ ಒಗ್ಗಟ್ಟಾಗಿ, ಒಕ್ಕೊರಲಿನಿಂದ ನಾವು ನಮ್ಮ ರಾಜ್ಯದ ಪರಿಸ್ಥಿತಿಯನ್ನು ಹೇಳುವುದರ ಜೊತೆಗೆ ಯಾವುದೇ ಕಾರಣಕ್ಕೆ ಇವತ್ತು ನಾವು ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿರುವ ಆಪತ್ಕಾಲಿಕ ಪರಿಸ್ಥಿತಿಯನ್ನು ನಮ್ಮ ರೈತರು, ನಾವೇ ಎದುರಿಸುತ್ತಿರುವುದರಿಂದ ನಾವು ಒಗ್ಗಟ್ಟಾಗಿ ತೀರ್ಮಾನವನ್ನು ಪ್ರಕಟ ಮಾಡಬೇಕಾಗುತ್ತದೆ. ಒಂದು ಅರ್ಜಿಯನ್ನು ಸುಪ್ರೀಂ ಕೋರ್ಟಿಗೆ ಹಾಕಿದ ತಕ್ಷಣವೇ ನೀರು ಕೊಡಬೇಕೆಂದಿಲ್ಲ ಆಗಲೇ ಟ್ರಿಬ್ಯುನಲ್‌ನಲ್ಲಿ ಅವಾರ್ಡ್ ಆಗಿದೆ, ನೀರಿನ ಪ್ರಮಾಣವನ್ನು ಗೊತ್ತು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ, ಇಲ್ಲಿ ಯಾರೂ ಕೂಡ ರಾಜಕೀಯವನ್ನು ಪ್ರಸ್ತಾಪ ಮಾಡದೆ, ಹಿಂದೆ ಆದಂಥ ಎಲ್ಲಾ ಘಟನೆಗಳನ್ನು ಮರೆತು, ರಾಷ್ಟ್ರೀಯ ಕಸುಬನ್ನು ರಾಷ್ಟ್ರೀಯ ಸ್ವತ್ತನ್ನು ಬಳಕೆ ಮಾಡುವಾಗ federal structure ನಲ್ಲಿ ವಾಸ ಮಾಡತಕ್ಕಂತಹ ನಾವು ನಮ್ಮ ಹಕ್ಕಿನ ಪ್ರಮಾಣದ ನೀರನ್ನು ಸಮರ್ಥವಾಗಿ ಬಳಸಿಕೊಳ್ಳುವುದು ಹೇಗೆ? Tribunal award ಪ್ರಕಾರ ಅವರಿಗೆ ಎಷ್ಟು ನೀರು ಕೊಟ್ಟಿದ್ದೇವೆ ಎಂಬ ಸ್ಪಷ್ಟವಾದ ನಿಲುವಿನ ಪ್ರಕಾರ ನಮ್ಮ ರಾಜ್ಯದ ಹಿತವನ್ನು ಕಾಪಾಡಬೇಕು, ನೀರನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ತೀರ್ಮಾನವನ್ನು ಸರ್ಕಾರ ಹೇಳಬೇಕು. ಅದಕ್ಕೆ ಎಲ್ಲರೂ

ಕೂಡ ಸರ್ಕಾರದ ಪರವಾಗಿ ಒಂದು ಧ್ವನಿಯಲ್ಲಿ ನಿಂತು ಈ ತೀರ್ಮಾನಕ್ಕೆ ಬೆಂಬಲವನ್ನು ಕೊಡಬೇಕು.

ಶ್ರೀ ಎಂ.ಪಿ. ನರೇಂದ್ರಸ್ವಾಮಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಕೂಡ ಕಾವೇರಿ ಜಲಾನಯನ ಪ್ರದೇಶದಿಂದ ಚುನಾಯಿತನಾಗಿ ಬಂದಂತಹ ವನಾಗಿ ನನ್ನ ಕ್ಷೇತ್ರದ ಸುತ್ತ ಕಾವೇರಿ ನದಿ ಹರಿದು ಹೋಗುತ್ತಿದ್ದರೂ ಕುಡಿಯುವುದಕ್ಕೆ ನೀರಿಲ್ಲದೆ ಸಮಸ್ಯೆಯನ್ನು ಎದುರಿಸುತ್ತಿರತಕ್ಕಂತಹ ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆಯಲ್ಲಿ ಇದೆ ಎನ್ನುವುದನ್ನು ಈ ಸದನದಲ್ಲಿ ವಿಷಾದ ವ್ಯಕ್ತಪಡಿಸುತ್ತಾ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖಾಂತರ ನಾನು ನಿವೇದನೆ ಮಾಡಿಕೊಳ್ಳುವುದು ಇಷ್ಟೆ. ನೀರಾವರಿ ಸಚಿವರು ಮತ್ತು ನಮ್ಮ ಇಂದಿನ ಬೆಂಗಳೂರು ನಗರಾಭಿವೃದ್ಧಿ ಸಚಿವರು ನಮ್ಮ ಮಳವಳ್ಳಿ ತಾಲ್ಲೂಕಿಗೆ ಹಲವಾರು ಸಂದರ್ಭಗಳಲ್ಲಿ ಬಂದಿದ್ದಾರೆ. ಅವರೂ ಕೂಡ ಪ್ರಯತ್ನ ಮಾಡಿ ಆ ಭಾಗದ ನೀರಿನ ಬವಣೆಯನ್ನು ನೀಗಿಸುವುದಕ್ಕೋಸ್ಕರ ಸಹಕಾರ ನೀಡಿದ್ದಾರೆ. ಕಣ್ಣಾರೆ ಕಂಡಿದ್ದಾರೆ. ಅಲ್ಲಿರತಕ್ಕಂತಹ ನೀರು ಎಷ್ಟು ಸಮಸ್ಯೆಯಲ್ಲಿದೆ ಎಂದರೆ, ನೀವು ಬಿಜಾಪುರ, ಕೋಲಾರ ಹಾಗೂ ಗುಲ್ಬರ್ಗದ ಬಗ್ಗೆ ಮಾತನಾಡುತ್ತಿದ್ದರೆ ಕಾವೇರಿ ಪಕ್ಕದಲ್ಲಿಯೇ ಕೇವಲ ಕೆಲವೇ ಕಿಲೋ ಮೀಟರುಗಳ ಅಂತರದಲ್ಲಿ ಪಕ್ಕದಲ್ಲಿರ ತಕ್ಕಂತಹ ಕಾವೇರಿಯಲ್ಲಿ ಈ ಬೇಸಿಗೆಗೆ ಒಂದು ಊರಿನಲ್ಲಿ 19 ಬೋರ್‌ವೆಲ್‌ಗಳನ್ನು ಜಿಲ್ಲಾ ಪಂಚಾಯಿತಿಯಿಂದ ಹೊಡೆಸಿದ್ದಾರೆ. ಆದರೂ ಕೂಡ ನೀರು ಬರುವುದಕ್ಕೆ ಸಾಧ್ಯವಿಲ್ಲ. ಇಡೀ ಹಲಗೂರು ಹೋಬಳಿ ಸಂಪೂರ್ಣ ಇವತ್ತು ಕುಡಿಯುವ ನೀರಿನ ಸಮಸ್ಯೆಯಿಂದ ಬಳಲುತ್ತಿದೆ. ವೀರಾಜಿಪುರ ಹೋಬಳಿಯ ಕೆರೆಗಳಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರೂ ಕೂಡ ಇಲ್ಲದೆ ಇರುವ ಪರಿಸ್ಥಿತಿಯಲ್ಲಿ ನಾವು ಒದ್ದಾಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಏಕೆ ಇಲ್ಲಿ ಈ ವಿಷಯವನ್ನು ಸೂಚ್ಯವಾಗಿ ಉಪಯೋಗಿಸಿದೆ ಎಂದರೆ, ನಮ್ಮ ಕಾವೇರಿ ಬೇಸಿನ್‌ನಲ್ಲಿರತಕ್ಕಂತಹ ಮಂಡ್ಯ ಜಿಲ್ಲೆ ಅಂದ ತಕ್ಷಣ ತಮಿಳುನಾಡಿನ ಜನ ನಮ್ಮನ್ನು ನೋಡುತ್ತಿರತಕ್ಕಂತಹ ರೀತಿ ಅದರೊಳಗಿರತಕ್ಕಂತಹ ಶೋಷಿತರು ನಾವಾಗಿದ್ದೇವೆ. ಆ ಭಾಗದ ಜನರಿಗೆ ಆಗುತ್ತಿರತಕ್ಕಂತಹ ಅನ್ಯಾಯವನ್ನು ಇಂದು ಅವರು ಏನು IA ಗಳ ಮುಖಾಂತರ ಸುಪ್ರೀಂ ಕೋರ್ಟಿನಲ್ಲಿ ನ್ಯಾಯ ದೊರಕುವ ಸಂದರ್ಭದಲ್ಲಿ ದಿಕ್ಕು ತಪ್ಪಿಸುತ್ತಿದ್ದಾರೆ, ಅಂತಹ ಸಂದರ್ಭದಲ್ಲಿ ಇಂತಹ ಅಂಶಗಳನ್ನು ದಯಮಾಡಿ ನಮ್ಮ ವಾದವನ್ನು ಮಂಡಿಸತಕ್ಕಂತಹ ಸಂದರ್ಭದಲ್ಲಿ ಕಾವೇರಿ

ಅಂಚಿನ ಭಾಗದ ಜನರಿಗೆ ಕುಡಿಯುವುದಕ್ಕೆ ಜಾನುವಾರುಗಳಿಗೆ ಆಗಲಿ, ಜನಗಳಿಗಾಗಲಿ ನೀರು ಇಲ್ಲದೆ ಇರತಕ್ಕಂತಹ ಪರಿಸ್ಥಿತಿಯನ್ನು ನಿವೇದನೆ ಮಾಡುತ್ತಾ, ಆ ಮುಖಾಂತರ ನಮಗೆ ನ್ಯಾಯ ದೊರಕಿಸಿ ಕೊಡಿ, ಈ ರಾಜ್ಯದ ಪರ ಹೋರಾಟಕ್ಕೆ ನಾವೂ ಕೂಡ ಒಕ್ಕೊರಲ ಧ್ವನಿಯಾಗಿರುತ್ತೇವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸದನದ ವಿವಿಧ ಭಾಗಗಳಿಂದ ಬಂದಂತಹ ವಿಮರ್ಶಾತ್ಮಕ ಸಲಹೆಗಳನ್ನು ಸರ್ಕಾರ ಅತ್ಯಂತ ಪ್ರೀತಿ ಪೂರ್ವಕವಾಗಿ ಸ್ವೀಕಾರ ಮಾಡುತ್ತದೆ. ರಾಜ್ಯದ ನೆಲ, ಜಲ, ಗಡಿ ಇದರ ಬಗ್ಗೆ ಯಾವತ್ತೂ ಈ ಸದನ ಸಹಮತವನ್ನು ವ್ಯಕ್ತಪಡಿಸುತ್ತದೆ. ಯಾವುದೇ ಸಂದರ್ಭದಲ್ಲಿ ಇದರಲ್ಲಿ ವ್ಯತ್ಯಾಸಗಳನ್ನು ನಾವು ಕಾಣಲಿಲ್ಲ. ಈ ಸಾರಿ ಕೂಡ ನಾವು ಅದೇ ರೀತಿಯಲ್ಲಿ ಮುಂದುವರೆಯುವುದಕ್ಕೆ ದೃಢ ನಿಶ್ಚಯ ಮಾಡಿದ ಹಾಗೆ ಕಾಣುತ್ತದೆ. ಅಲ್ಲಲ್ಲಿ ಸಣ್ಣಪುಟ್ಟ ವೈಯಕ್ತಿಕ ರಾಜಕಾರಣಗಳನ್ನು ಮಾತ್ರ ಮಾತನಾಡುತ್ತಾರೆ ಹೊರತು ರಾಜ್ಯದ ಹಿತದೃಷ್ಟಿಯಿಂದ ಯಾರೂ ಕೂಡ ರಾಜಕಾರಣ ಮಾಡುವುದಿಲ್ಲ ಎಂಬ ಸ್ಪಷ್ಟವಾದ ಅಭಿಪ್ರಾಯ ನನ್ನಲ್ಲಿ ಇದೆ. ಇದೊಂದು ಕ್ಯಾತೆ ಅವರು ತೆಗೆದಿರುವಂಥದ್ದು ವಿಶೇಷವಾಗಿ ಸುಮ್ಮನೆ ಕರ್ನಾಟಕದ ಜನರಾದ ನಮ್ಮನ್ನು ಕೆಣಕಲಿಕ್ಕೆ ಎಂದು ಅನ್ನಿಸುತ್ತದೆ. ಈ ಹಿಂದೆ ಕೂಡ ಮೂರ್ನಾಕು interim applicationಗಳನ್ನು ಅವರು ಹಾಕಿದ್ದಾರೆ. ಸುಪ್ರೀಂ ಕೋರ್ಟ್ ಭಾರಿ ನೇರವಾಗಿ ಅವರಿಗೆ ಹೇಳಿದೆ. 'List the application along with the main appeal. All the other pending applications shall be listed along with the main appeal'. ಎಂದು ಸುಪ್ರೀಂ ಕೋರ್ಟ್ ಹೇಳಿರುವ ಮಾತನ್ನು ಈಗಾಗಲೇ ಅವರಿಗೆ ತಿಳಿಸಿದೆ. ಆದರೂ ಕೂಡ ಈ ಬಾರಿ ಒಂದು ಸಣ್ಣ ಹೊಸ ಅಂಶವನ್ನು ಇಟ್ಟುಕೊಂಡು ಹೊಸ IA file ಮಾಡಿ ನಮ್ಮನ್ನು ಕೆಣಕುವಂತಹ ಪ್ರಯತ್ನಗಳನ್ನು ನಮ್ಮ ನೆರೆ ರಾಜ್ಯದವರಾದ ತಮಿಳುನಾಡಿನವರು ಮಾಡುತ್ತಿರುವುದು ನಾವು ಕಾಣುತ್ತಿದ್ದೇವೆ. ನಾನು ಎರಡು – ಮೂರು ಅಂಶಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಮಾನ್ಯ ಬಸವರಾಜ ಬೊಮ್ಮಾಯಿಯವರು ಕೂಲಂಕಷವಾಗಿ ಎಲ್ಲವನ್ನು ಲಿಖಿತವಾಗಿ ಸದನದ ಮುಂದಿಟ್ಟಿದ್ದಾರೆ. ಇದರ ಬಗ್ಗೆ ನಾವು ಕೈಗೊಳ್ಳುವ ಕೆಲಸ

ಕಾರ್ಯಗಳು, ತೆಗೆದುಕೊಳ್ಳಬೇಕಾದ ನಿಲುವುಗಳನ್ನು ಅವರು ಸೂಕ್ಷ್ಮವಾಗಿ ಇಲ್ಲಿ ಇಡುವ ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಸನ್ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು Planning Commission ನವರು National Water Policy ಬಗ್ಗೆ ಹೇಳಿದ್ದಾರೆ. ಈಗಾಗಲೇ ತಮಗೆ ಗೊತ್ತಿದ್ದ ಮಟ್ಟಿಗೆ Planning Commission ಹೊಸ ಪಾಲಿಸಿ ತರುವ ಬಗ್ಗೆ ಸೂಚನೆಗಳನ್ನು ಕೊಟ್ಟಿರುವುದು ನಾವು ಕಂಡಿದ್ದೇವೆ. 12th plan ನಲ್ಲಿ ಈ ಒಂದು ಹೊಸ water policy ಯನ್ನು ತರುವ ಇರಾದೆ ಕೇಂದ್ರಕ್ಕೆ ಇದೆ ಎಂದು ಕೂಡ ನಾನು ತಿಳಿದು ಕೊಂಡಿದ್ದೇನೆ. ನಾನು ಕೇಂದ್ರ ಸರ್ಕಾರ ಹಾಗೂ ಪ್ರಧಾನ ಮಂತ್ರಿಗಳನ್ನು ಆಗ್ರಹ ಮಾಡುತ್ತೇನೆ. ಯಾವುದೇ ರೀತಿಯ ಹೊಸ water policy ಯನ್ನು ತರುವಂತಹ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರದ ಎಲ್ಲಾ ವಿಚಾರಗಳನ್ನು ಕೂಡ ಕೇಳುವಂತಹ ಪ್ರಯತ್ನವನ್ನು ಮಾಡಬೇಕು. ಯಾವುದೇ ವ್ಯತ್ಯಾಸಗಳು ಆಗಬಾರದು. ನಾವೂ ಕೂಡ ಸದನದಲ್ಲಿ ಇದರ ಬಗ್ಗೆ ಚರ್ಚೆ ಮಾಡಿ, ಹೊಸ water policy ಯಲ್ಲಿ ಏನೆಲ್ಲ ಇರಬೇಕೆಂಬುದರ ಬಗ್ಗೆ ನಮ್ಮ ಹೇಳಿಕೆಗಳನ್ನು ಕೂಡ ಅವರು ಗಣನೆಗೆ ತೆಗೆದುಕೊಳ್ಳಬೇಕು. ಇದು ಒಂದು. ಎರಡನೆಯದಾಗಿ, ನಾವು ಬೇರೆ ಬೇರೆ ಸಂದರ್ಭಗಳಲ್ಲಿ ಸಾಕಷ್ಟು ಬಾರಿ ಕಂಡಿದ್ದೇವೆ. ರಾಜಕೀಯ ಪ್ರಭಾವಕ್ಕೆ ಒಳಗಾಗುವಂಥದ್ದು ತಮಿಳುನಾಡು ಸ್ವಲ್ಪ ದೊಡ್ಡ ರಾಜ್ಯ. ರಾಜಕೀಯ ಪ್ರಭಾವಕ್ಕೆ ಕೇಂದ್ರ ಒಳಗಾಗುವುದು ಯಾವುದೇ ಸಂದರ್ಭದಲ್ಲಿ ಆಗಬಾರದು ಎಂದು ಹೇಳುವಂಥದ್ದು ಕೂಡ ನನ್ನ ಆಗ್ರಹ ಇದೆ. ಮೂರನೆಯದಾಗಿ, ಈ ರೀತಿಯ ಕ್ಯಾತೆ ತೆಗೆಯುವಂತಹ ಸಂದರ್ಭ ದಲ್ಲಿ ಕೇಂದ್ರ ಸರ್ಕಾರ ತಕ್ಷಣ ಮಧ್ಯಪ್ರವೇಶ ಆಗಬೇಕು. ಇದೊಂದು provocation ಆಗಬಾರದು. ಈಗಾಗಲೇ ನಾವು ನೋಡಿದ್ದೇವೆ. ಅವರು ಒಂದು IA ಹಾಕಿದ್ದಾರೆ ಅಂದ ತಕ್ಷಣ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೇಳಿಕೆಗಳನ್ನು ರೈತರ ಮನಸ್ಸಿನ ಆತಂಕ ಈ ರೀತಿಯ ಸಂಗತಿಗಳು ನಡೆದಿರುವುದು ನಾವು ಕಂಡಿದ್ದೇವೆ. ಆದಕಾರಣ ನನಗನ್ನಿ ಸುತ್ತದೆ, ಕೇಂದ್ರ ಇಂತಹ ಸಂದರ್ಭದಲ್ಲಿ ರಾಜ್ಯ ರಾಜ್ಯಗಳೊಳಗೆ ಸಂಘರ್ಷ ಆಗಬಾರದು ಎಂದು ಹೇಳುವ ದೃಷ್ಟಿಯಿಂದ ಸೂಕ್ಷ್ಮವಾಗಿ ಮಧ್ಯ ಪ್ರವೇಶ ಮಾಡುವ ಅವಶ್ಯಕತೆ ಇದೆ ಎಂದು ಹೇಳುವಂತಹ ಆಗ್ರಹ ಕೂಡ ನನ್ನದಾಗಿದೆ. ವಿಶೇಷವಾಗಿ ಈಗ ಅವರು ಕೊಟ್ಟಿರುವಂತಹ affidavit

highly illegal, ಇದು ನಮ್ಮ ರಾಜ್ಯದ ರೈತರ ಹಿತಾಸಕ್ತಿಗೆ ಮಾರಕವಾಗಿರ ತಕ್ಕಂತಹದ್ದು ಎನ್ನುವುದನ್ನು ನಾವೆಲ್ಲಾ ಕಂಡು ಕೊಂಡಿದ್ದೇವೆ. ಖಂಡಿತವಾಗಿ ಸರ್ಕಾರ ಹೇಳುವುದಕ್ಕೆ ಇಚ್ಛೆ ಪಡುತ್ತಿದೆ, ಕಾನೂನಾತ್ಮಕವಾಗಿ ಮತ್ತು ರಾಜಕೀಯವಾಗಿ ಇದನ್ನು ಸಮರ್ಥವಾಗಿ ಎದುರಿಸಲಿಕ್ಕೆ ಎಲ್ಲಾ ಹೆಜ್ಜೆಗಳನ್ನು ಇಡುವುದಕ್ಕೆ ರಾಜ್ಯ ಸರ್ಕಾರ ಯಾವುದೇ ಹಿಂದೇಟು ಹಾಕುವುದಿಲ್ಲ. ಇಡೀ ಸದನ ಮಾತ್ರವಲ್ಲ, ರಾಜ್ಯದ ಎಲ್ಲ ಬೇರೆ ಬೇರೆ ಸಂಘಟನೆಗಳ ಹಾಗೂ ರಾಜ್ಯದ ರೈತರ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡು ಎದುರಿಸುವಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಸಂದರ್ಭದಲ್ಲಿ ಯಾವುದೇ ರೆಸಲ್ಯೂಷನ್ ಮತ್ತೊಂದು ಅಗತ್ಯವಿಲ್ಲ. ಏಕೆಂದರೆ, ಇದು ಲಿಸ್ಟ್‌ನಲ್ಲಿ ಕೂಡ ಬಂದಿಲ್ಲ. ನಮ್ಮನ್ನು ಬೆದರಿಸುವಂತಹ ಒಂದು ತಂತ್ರ ಮಾತ್ರ ಮಾಡಿದ್ದಾರೆ. ಆದಕಾರಣ ಸಮಯ ಸಂದರ್ಭಗಳು ಬಂದಾಗ ಪ್ರತಿಪಕ್ಷದವರನ್ನೂ ಕರೆದು ನಿಮ್ಮ ಜೊತೆ ಸಮಾಲೋಚನೆ ಮಾಡಿ ಮುಂದಿನ ಹೆಜ್ಜೆ ಹೇಗೆ ಇಡಬೇಕೆಂಬ ತೀರ್ಮಾನಗಳನ್ನು ಮಾಡುತ್ತೇವೆ. ಪ್ರತಿಪಕ್ಷದ ನಾಯಕರನ್ನು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರಮುಖರನ್ನು ಸೇರಿಸಿಕೊಂಡು ಅವಶ್ಯಕತೆ ಬಿದ್ದಲ್ಲಿ ಸಮಾಲೋಚನೆ ಮಾಡಿ ಮುಂದಿನ ಹೆಜ್ಜೆ ಇಡುವುದು ಮತ್ತು ಇದರ ಬಗ್ಗೆ ಕಾನೂನಾತ್ಮಕವಾಗಿ ಏನೆಲ್ಲಾ ಮಾಡಬೇಕು ಅದನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದನ್ನು ಮುಂದುವರೆಸಿಕೊಂಡು ಹೋಗುವ ಕೆಲಸ ಮಾಡುತ್ತೇವೆ. ಈ ಸದನದ ಮುಖಾಂತರ ರಾಜ್ಯದ ಜನತೆ ಹಾಗೂ ವಿಶೇಷವಾಗಿ ಕಾವೇರಿ ಬೇಸಿನ್‌ನಲ್ಲಿ ಮತ್ತು ಈ ಭಾಗದ ಬೆಂಗಳೂರಿನ ಜನತೆಯನ್ನು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವುದೇ ಸಂದರ್ಭದಲ್ಲಿ ತಾವು ಆದೇಶಕ್ಕೆ ಹಾಗೂ ಆಕ್ರೋಶಕ್ಕೆ ಒಳಗಾಗುವಂತಹ ಅಗತ್ಯವಿಲ್ಲ. ರಾಜ್ಯ ಸರ್ಕಾರ ಇದನ್ನು ಅತ್ಯಂತ ಯಶಸ್ವಿಯಾಗಿ ನಿಭಾಯಿಸುತ್ತದೆ. ಸರ್ಕಾರ ನಿಮ್ಮ ಪರವಾಗಿದೆ. ಯಾವುದೇ ಹಾರಿಕೆ ಸುದ್ದಿಗಳು ಹಾಗೂ ಯಾವುದೇ ಹೇಳಿಕೆ ಗಳಿಗೆ ಯಾರೂ ಕೂಡ provoke ಆಗಬಾರದು. ಮತ್ತು ಶಾಂತಿ ಸುವ್ಯವಸ್ಥೆ ಯನ್ನು ಕಾಪಾಡಬೇಕು. ಖಂಡಿತ ನಮಗೆ ವಿಶ್ವಾಸ ಇದೆ, ಈ ಕಾನೂನಿನ ವ್ಯಾಪ್ತಿಯಲ್ಲಿ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಖಂಡಿತ ನಾವು ಯಶಸ್ವಿ ಯಾಗುತ್ತೇವೆ ಎನ್ನುವಂತಹ ಮಾತನ್ನು ಹೇಳಿ, ಈ ಸಂದರ್ಭದಲ್ಲಿ ಇಡೀ ರಾಜ್ಯದ ಎಲ್ಲಾ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾವು ಮುಂದೆ ಹೆಜ್ಜೆ

ಇಡುತ್ತೇವೆ. ಮತ್ತು ಇದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಸಕಾರಾತ್ಮಕ ದೃಷ್ಟಿಯಿಂದ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿ, ರಾಜ್ಯದ ಜನ ಆತಂಕಕ್ಕೀಡಾಗಬಾರದು, ಯಾವುದೇ ರೀತಿಯಲ್ಲಿ ಕಾನೂನನ್ನು ಕೈಗೆತ್ತಿ ಕೊಳ್ಳುವಂತಹ ಕೆಲಸ ಕಾರ್ಯಗಳು ಆಗಬಾರದು ಎಂದು ಹೇಳುವುದನ್ನು ಈ ಸದನದ ಮುಖಾಂತರ ರಾಜ್ಯದ ಜನತೆಯಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

10. ನಿಯಮ 69ರ ಮೇರೆಗೆ ಚರ್ಚೆ :

ವಿಷಯ : NREGS ಗೆ ಅನುದಾನ ಕಡಿಮೆ ಆಗಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾತನಾಡುತ್ತಿದ್ದೆ, ಬಚ್ಚೇಗೌಡರು NREGS ನಲ್ಲಿ ಕೇಂದ್ರ ಸರ್ಕಾರ ಹಣ ಕಡಿಮೆ ಮಾಡಿದೆ ಎಂದು ಹೇಳಿದರು. ನಾನು ಸುಮ್ಮನೆ ನಿಮ್ಮ ಗಮನಕ್ಕೆ ತರುತ್ತೇನೆ. ಕೇಂದ್ರ ಸರ್ಕಾರ ಹಣ ಕಡಿಮೆ ಮಾಡಿಲ್ಲ. ಹಣ ಕಡಿಮೆ ಆಗುವುದಕ್ಕೆ ನೀವು ಕಾರಣಕರ್ತರಾಗಿದ್ದೀರಿ. ಇದಕ್ಕೆ ಸರ್ಕಾರ ಹೊಣೆ. NREGS ಪ್ರಾರಂಭವಾದ ಮೇಲೆ Economic Survey ಯಲ್ಲಿ ಸರ್ಕಾರವೇ ಹೇಳಿರುವುದು. 2006–07ರಲ್ಲಿ ರೂ.341 ಕೋಟಿ ನಿಮಗೆ ಖರ್ಚು ಮಾಡುವುದಕ್ಕೆ ಇದ್ದ ಫಂಡ್ಸ್. ಖರ್ಚು ಮಾಡಿದ್ದು ರೂ.251 ಕೋಟಿ. 2007–08ರಲ್ಲಿ 419 ಕೋಟಿ funds available ಇತ್ತು. ಖರ್ಚು ಮಾಡಿದ್ದು ರೂ.236 ಕೋಟಿ. 2008–09ರಲ್ಲಿ ರೂ.547 ಕೋಟಿ ಫಂಡ್ಸ್ ಇತ್ತು. ಖರ್ಚು ಮಾಡಿದ್ದು ರೂ.237 ಕೋಟಿ. ಇನ್ನೂ 200 ಕೋಟಿ ಖರ್ಚು ಮಾಡಲಿಲ್ಲ. 2009–10ರಲ್ಲಿ 3026 ಕೋಟಿ funds available ಇತ್ತು. ಖರ್ಚು ಮಾಡಿದ್ದು 2569 ಕೋಟಿ ರೂಪಾಯಿಗಳು. 2010–11 ರಲ್ಲಿ 2,349 ಕೋಟಿ ರೂ.ಗಳು ಇತ್ತು. ಖರ್ಚು ಮಾಡಿರುವುದು 2,081 ಕೋಟಿಗಳು. ನೀವು ಖರ್ಚು ಮಾಡಲಿಲ್ಲವೆಂದು ಈ ವರ್ಷಕ್ಕೆ 1,841 ಕೋಟಿಗಿಳಿಸಿದ್ದಾರೆ. ಎಲ್ಲವನ್ನೂ ತೆಗೆದುಕೊಂಡರೆ ನೀವು ಖರ್ಚು ಮಾಡಿರುವುದು ಡಿಸೆಂಬರ್ ಅಂತ್ಯದವರೆಗೆ 1,162 ಕೋಟಿ. ವರ್ಷ ವರ್ಷ ಏಕೆ ಕಡಿಮೆಯಾಯಿತು ಎಂದರೆ, ಇವರು ಹಣವನ್ನು ಖರ್ಚು ಮಾಡಲಿಲ್ಲ. 2010–11ರಲ್ಲಿ 3,000 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಕೊಟ್ಟಿರುವಾಗ 2011–12ರಲ್ಲಿ ಏಕೆ ಕಡಿಮೆ ಮಾಡುತ್ತಾರೆ? ಏಕೆಂದರೆ, ನಿಮಗೆ ಕೇಂದ್ರ ಸರ್ಕಾರ ಕೊಟ್ಟ